ವಿಜಯಪುರ । ಸಂಪುಟ 02 । ಸಂಚಿಕೆ 09 । ಪುಟ 4 । ₹ 3.00

https://udayarashminews.com

udayarashmi 7026028778

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಶನಿವಾರ, ಫೆಬ್ರವರಿ 24, 2024

"ರಾಜ್ಯದಲ್ಲಿ ಭೀಕರ ಬರದಿಂದ ಜನರು, ರೈತರು ತತ್ತರಿಸಿದ್ದಾರೆ. ಆದರೆ ಇವರ ನೆರವಿಗೆ ರಾಜ್ಯ ಸರಕಾರ ಬಾರದೇ ತಮ್ಮ ಜವಾಬ್ದಾರಿಯಿಂದ ನುಣಚಿಕೊಳ್ಳಲು ಕೇಂದ್ರ ಸರಕಾರದ ಮೇಲೆ ಗೂಬೆ ಕೂರಿಸುತ್ತ ಬರದಲ್ಲೂ ರಾಜಕೀಯ ಮಾಡುತ್ತಿದೆ."

– ಉಮೇಶ್ ಕಾರಜೋಳ

ಬಿಜೆಪಿ ಎಸ್ ಸಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ

ಉದಯರಶ್ಮಿ ದಿನಪತ್ರಿಕೆ

ಲೋಕಸಭೆ ಚುನಾವಣೆ 2024 । ಬಿಜೆಪಿ– ಜೆಡಿಎಸ್ ಮೈತ್ರಿಯಿಂದ ರಣತಂತ್ರ । ಅಭ್ಯರ್ಥಿಗಳ ವಿನಿಮಯ ಸಾಧ್ಯತೆ

ಜೆಡಿಎಸ್‌ಗೆ ಐದು ಕ್ಷೇತ್ರ ನೀಡಿದ ಬಿಜೆಪಿ

ಬೆಂಗಳೂರು: ರಾಜ್ಯ ಚುನಾವಣಾ ಕಣ ರಂಗೇರುತ್ತಿದ್ದು, ಕಾಂಗ್ರೆಸ್ ಪಕ್ಷವನ್ನು ಸೋಲಿಸಲು ಬಿಜೆಪಿ– ಜೆಡಿಎಸ್ ಮೈತ್ರಿ ರಣತಂತ್ರಗಳನ್ನು ಹೂಡುತ್ತಿವೆ. ಇನ್ನು, ಸೀಟು ಹಂಚಿಕೆ ಒಪ್ಪಂದದ ಭಾಗವಾಗಿ ಬಿಜೆಪಿಯು ಜೆಡಿಎಸ್‌ಗೆ ಐದು ಲೋಕಸಭಾ ಕ್ಷೇತ್ರಗಳನ್ನು ನೀಡಿದೆ.

ಮೈತ್ರಿ ಒಪ್ಪಂದದ ಭಾಗವಾಗಿ ಅಭ್ಯರ್ಥಿಗಳ ವಿನಿಮಯವನ್ನು ಸಹ ಒಳಗೊಂಡಿರಬಹುದು ಎಂದು ಪಕ್ಷದ ಶಾಸಕಾಂಗ ನಾಯಕ ಎಚ್‌ಡಿ ಕುಮಾರಸ್ವಾಮಿ ಅವರ ಆಪ್ತ ಮೂಲಗಳು ತಿಳಿಸಿವೆ. ಜೆಡಿಎಸ್‌ಗೆ ಹಾಸನ, ಮಂಡ್ಯ, ಕೋಲಾರ, ಬೆಂಗಳೂರು ಗ್ರಾಮಾಂತರ ಮತ್ತು ತುಮಕೂರಿನಲ್ಲಿ ಆಯ್ಕೆ ಮಾಡಲು ಮುಕ್ತ ಅವಕಾಶವಿದೆ ಎಂದು ಮೂಲಗಳು ತಿಳಿಸಿವೆ.

ಮಾಜಿ ಮುಖ್ಯಮಂತ್ರಿ ಎಚ್ ಡಿ ಕುಮಾರಸ್ವಾಮಿ ಮತ್ತು ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಗುರುವಾರ (ಫೆಬ್ರವರಿ 22) ರಂದು ನವದೆಹಲಿಗೆ ತೆರಳಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ಚುನಾವಣಾ ಒಪ್ಪಂದ ಮತ್ತು ಕ್ಷೇತ್ರ ಹಂಚಿಕೆ ಬಗ್ಗೆ ಚರ್ಚಿಸಿದ್ದಾರೆ.

ಜೆಡಿಎಸ್‌ಗೆ ಐದು ಕ್ಷೇತ್ರ, ಅಭ್ಯರ್ಥಿಗಳು ಯಾರು?

ಬಿಜೆಪಿ – ಜೆಡಿಎಸ್‌ನ ಸೀಟು ಹಂಚಿಕೆ ಒಪ್ಪಂದವು ಅಭ್ಯರ್ಥಿಗಳ ವಿನಿಮಯವನ್ನು ಒಳಗೊಂಡಿರುವ ಸಾಧ್ಯತೆಯಿದೆ. "ಹಾಸನ, ಮಂಡ್ಯ ಮತ್ತು ಕೋಲಾರದಲ್ಲಿ ಜೆಡಿಎಸ್ ಪಕ್ಷದಿಂದಲೇ ಅಭ್ಯರ್ಥಿ ಇರಲಿದ್ದಾರೆ. ಆದರೆ, ಬೆಂಗಳೂರು ಗ್ರಾಮಾಂತರದಿಂದ ಜೆಡಿಎಸ್ ಅಭ್ಯರ್ಥಿ ಬಿಜೆಪಿ ಚಿಹ್ನೆಯ ಮೇಲೆ ಸ್ಪರ್ಧಿಸುವ ಸಾಧ್ಯತೆಯಿದೆ. ತುಮಕೂರಿನಲ್ಲಿ ಜೆಡಿಎಸ್ ಚಿಹ್ನೆನಿಂದ ಬಿಜೆಪಿ ಅಭ್ಯರ್ಥಿ ಸ್ಪರ್ಧಿಸಬಹುದು" ಎಂದು ಮೂಲವೊಂದು ವಿವರಿಸಿದೆ.

ವಿಧಾನಸಭಾ ಚುನಾವಣೆಯಲ್ಲಿ ಸೋತ ನಂತರ ತನ್ನ ಅಸ್ತಿತ್ವವೇ ಕುಸಿದು ಹೋಗುವ ಆತಂಕದಲ್ಲಿರುವ ಜೆಡಿಎಸ್

ಔಪಚಾರಿಕವಾಗಿ ಬಿಜೆಪಿ ನೇತೃತ್ವದ ಎನ್‌ಡಿಎಗೆ ಸೆಪ್ಟೆಂಬರ್ 2023 ರಲ್ಲಿ ಸೇರ್ಪಡೆಯಾಯಿತು. ಲೋಕಸಭೆ ಚುನಾವಣೆಗೆ ಮುಂಚಿತವಾಗಿ ಕೇಸರಿ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡಿದೆ.

ಉಳಿಸಿಕೊಳ್ಳಲಿದೆಯಾ ಜೆಡಿಎಸ್ ತನ್ನ ಭದ್ರಕೋಟೆ?

ಜೆಡಿಎಸ್ ಭದ್ರಕೋಟೆ ಎಂದೇ ಪರಿಗಣಿಸಲ್ಪಟ್ಟಿರುವ ಹಾಸನದಲ್ಲಿ ಈಗಾಗಲೇ ಜೆಡಿಎಸ್ ಸಂಸದ– ರಿದ್ದಾರೆ. ಒಕ್ಕಲಿಗರ ಹೃದಯಭಾಗ ಮಂಡ್ಯದಲ್ಲಿ ಬಿಜೆಪಿ ಬೆಂಬಲಿತ ಪಕ್ಷೇತರ ಅಭ್ಯರ್ಥಿ ಸುಮಲತಾ ಅಂಬರೀಶ್ ಸಂಸದರಾಗಿದ್ದಾರೆ. ಕೋಲಾರದಲ್ಲಿ ಬಿಜೆಪಿ ಸಂಸದರಿದ್ದಾರೆ. ಮೂಲಗಳ ಪ್ರಕಾರ, ಖ್ಯಾತ ಹೃದಯ ಶಸ್ತ್ರಚಿಕಿತ್ಸಕ ಡಾ.ಸಿ.ಎನ್. ಮಂಜುನಾಥ್ ಅವರನ್ನು ಕಣಕ್ಕಿಳಿಸಲು ಬಿಜೆಪಿ ವರಿಷ್ಠರು ಬಯಸಿದ್ದಾರೆ. ಜೆಡಿ– ಎಸ್ ವರಿಷ್ಠ ಎಚ್.ಡಿ.ದೇವೇಗೌಡರ ಅಳಿಯ ಡಾ.ಮಂಜುನಾಥ್ ಅವರು ಪ್ರಸ್ತುತ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಸಹೋದರ ಡಿ.ಕೆ.ಸುರೇಶ್ ಅವರು ಹೊಂದಿರುವ ಬೆಂಗಳೂರು ಗ್ರಾಮಾಂತರದಿಂದ ಬಿಜೆಪಿಯ ಚಿಹ್ನೆಯ ಮೇಲೆ ಸ್ಪರ್ಧಿಸುತ್ತಾರೆ ಎಂಬ ಊಹಾಪೋಹಗಳು ದಟ್ಟವಾಗಿವೆ.

ತುಮಕೂರಿನಲ್ಲಿ ಬಿಜೆಪಿಯ ಹಿರಿಯ ಮುಖಂಡ ವಿ ಸೋಮಣ್ಣ ಜೆಡಿಎಸ್ ಚಿಹ್ನೆಯ ಅಭ್ಯರ್ಥಿಯಾಗಲಿದ್ದಾರೆ ಎಂಬ ಊಹಾಪೋಹವಿದೆ. ಈ ನಿರ್ಧಾರಗಳು ಜಾತಿ ಲೆಕ್ಕಾಚಾರ ಮತ್ತು ಹಿಂದಿನ ಚುನಾವಣೆಗಳಲ್ಲಿ ಜಾತಿವಾರು ಮತ್ತು ಪಕ್ಷವಾರು ಮತ ಹಂಚಿಕೆ, ಗೆಲುವಿನ ಸಾಮರ್ಥ್ಯ ಮತ್ತು ಅಭ್ಯರ್ಥಿಯ ವೈಯಕ್ತಿಕ ವರ್ಚಸ್ಸನ್ನು ಒಳಗೊಂಡಿರುವ ಇತರ ಸಮೀಕ್ಷೆಯ ಮೇಲೆ ಆಧರಿಸಿದೆ.

ಕುಮಾರಸ್ವಾಮಿ ಅವರು ತಮ್ಮ ಪುತ್ರನೊಂದಿಗೆ ಬುಧವಾರ ದಿಢೀರ್ ದೆಹಲಿಗೆ ತೆರಳಿದ್ದರು. ಖ್ಯಾತ ನ್ಯಾಯಶಾಸ್ತ್ರಜ್ಞ ಫಾಲಿ ಎಸ್ ನಾರಿಮನ್ ಅವರಿಗೆ ಗೌರವ ಸಲ್ಲಿಸಲು ಭೇಟಿ ನೀಡಿದ್ದರೂ, ಕೂಡ ಗುರುವಾರ, ತಂದೆ–ಮಗ ಇಬ್ಬರೂ ಅಮಿತ್ ಶಾ ಅವರನ್ನು ಭೇಟಿಯಾಗಿ ಸೀಟು ಹಂಚಿಕೆ ಬಗ್ಗೆ ಚರ್ಚಿಸಿದ್ದರು.

(ಮಾಹಿತಿ: ಡೆಕ್ಕನ್ ಹೆರಾಲ್ಡ್)

ಫೆಬ್ರವರಿ ಅಂತ್ಯದಲ್ಲಿ ಬಿಜೆಪಿ– ಜೆಡಿಎಸ್ ಮಾತುಕತೆ

ಈ ತಿಂಗಳ ಅಂತ್ಯದಲ್ಲಿ ಬಿಜೆಪಿಯು ಜೆಡಿಎಸ್‌ನೊಂದಿಗೆ ಮಾತುಕತೆ ನಡೆಸಲಿದೆ ಎಂದು ಮೂಲಗಳು ತಿಳಿಸಿವೆ. ಇಲ್ಲಿ ಬಿಜೆಪಿ ಮಂಡ್ಯವನ್ನು ಉಳಿಸಿಕೊಳ್ಳಲು ಬಯಸಿದೆ ಎಂಬ ವರದಿಗಳ ನಂತರ ಅಮಿತ್ ಶಾ ಅವರನ್ನು ಭೇಟಿ ಮಾಡಲು ಎಚ್ ಡಿ ಕುಮಾರಸ್ವಾಮಿ ತೆರಳಿದ್ದರು ಎನ್ನುವುದು ವಿಶೇಷ.

ಮಂಡ್ಯದಲ್ಲಿ ಬಿಜೆಪಿ ಸುಮಲತಾ ಅವರನ್ನು ಬಿಜೆಪಿ ಕಣಕ್ಕಿಳಿಸುತ್ತದೆ ಎಂಬ ವರದಿಗಳಿಂದ ಮಂಡ್ಯದ ಜೆಡಿಎಸ್ ಕಾರ್ಯಕರ್ತರು ಅಸಮಾಧಾನಗೊಂಡಿದ್ದಾರೆ. ಮಂಡ್ಯ ಕ್ಷೇತ್ರದ ಬಗ್ಗೆ ನಮ್ಮ ನಾಯಕರು ದೃಢವಾಗಿದ್ದಾರೆ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ. ಕುಮಾರಸ್ವಾಮಿ ಅವರು ಮಂಡ್ಯದಿಂದ ಸ್ಪರ್ಧಿಸುತ್ತಾರೆ ಎಂಬ ಊಹಾಪೋಹವಿದ್ದು, ಲೋಕಸಭೆ ಚುನಾವಣೆಗೆ ಸ್ಪರ್ಧಿಸುವ ಬಗ್ಗೆ ಇನ್ನೂ ನಿರ್ಧರಿಸಿಲ್ಲ ಎಂದು ಹೇಳಿದ್ದಾರೆ.

ರಾಜ ನುಡಿ

ತೆಗಳಲು ಜ್ಞಾನ ಬೇಕಿಲ್ಲ. ತಿಳಿಯಲು ಜ್ಞಾನ ಬೇಕೇ ಬೇಕು. ತಿಳಿದು ತೆಗಳಲು ಜ್ಞಾನದ ಉತ್ತುಂಗವಿರಬೇಕು. ತಿಳಿದೂ ತೆಗಳದೆ ಸುಮ್ಮನಿರಲು ವ್ಯಕ್ತಿತ್ವದ ಪರಿಪೂರ್ಣತೆ ಸಾಕು.

–ಡಾ. ರಾಜಶೇಖರ ನಾಗೂರ



ವಚನ ಚಿಂತನ 309

ವಿಜ್ಞಾನಿ ಸ್ಟೀಫನ್ ಹಾಕಿಂಗ್ಸ್ ಮತ್ತು ಅನುಭಾವಿ ಅಲ್ಲಮಪ್ರಭುಗಳು

ವಿಜ್ಞಾನಿ ಸ್ಟೀಫನ್ ಹಾಕಿಂಗ್ಸ್ ಮತ್ತು ಅನುಭಾವಿ ಅಲ್ಲಮಪ್ರಭುಗಳು
ಆದಿ ಅನಾದಿ ಒಂದಾದಂದು,
ಚಂದ್ರಸೂರ್ಯರೊಂದಾದಂದು,
ಧರೆ ಆಕಾಶ ಒಂದಾದಂದು;
ಗುಹೇಶ್ವರಲಿಂಗನು ನಿರಾಳನು.
– ಅಲ್ಲಮಪ್ರಭುಗಳು

ಆಧುನಿಕ ಖಗೋಳ ವಿಜ್ಞಾನದ ಅನೇಕ ಸಂಶೋಧನಾತ್ಮಕ ಅಂಶಗಳನ್ನು 12ನೇ ಶತಮಾನದ ಅಲ್ಲಮಪ್ರಭುಗಳ ವಚನಗಳಲ್ಲಿ ನಾವು ಕಾಣುತ್ತೇವೆ, 21ನೇ ಶತಮಾನದ ಪ್ರಸಿದ್ಧ ವಿಜ್ಞಾನಿ ಸ್ಟೀಫನ್ ಹಾಕಿಂಗ್‌ರ ಸಂಶೋಧನೆಯಂತೆ, ಈ ಸೃಷ್ಟಿಯು ಸುಮಾರು 13 ಬಿಲಿಯನ್ ವರ್ಷಗಳ ಹಿಂದೆ ಬಯಲನ್ನೊಳಗೊಂಡ ಶೂನ್ಯದಲ್ಲಿ ಉಂಟಾದ ಆದಿಮೂಲ ಪರಮಾಣು, ಅದರ ಅಂತರಂಗದಲ್ಲಿ ಉಂಟಾದ ಶಾಖದ ಪರಿಣಾಮದಿಂದ ಮಹಾಸ್ಫೋಟದೊಂದಿಗೆ ಸಿಡಿಯಿತು, ದೂರು ಚಿಮ್ಮಿದ ದ್ರವ್ಯವೇ ಕಾಲಾಂತರದಲ್ಲಿ ಗ್ರಹ ನಕ್ಷತ್ರಗಳಾಗಿ ಹೊರಹೊಮ್ಮಿದವು ಸೂಕ್ತ ವಾತಾವರಣ ಲಭಿಸಿದ ಗ್ರಹಗಳಲ್ಲಿ ಜೀವಿಗಳು ಉದಯಿಸಿದವು. ಮೇಲಿನ ವಚನವು ಇದೇ ತಿರುಳನ್ನು ಹೊಂದಿದ್ದು, ಗುಹೇಶ್ವರನು(ಮೂಲ ಚೈತನ್ಯ) ನಿರಾಳ(ರೂಪರಹಿತ) ಮಹಾಸ್ಫೋಟದ ಸಮಯದಲ್ಲಿ ಹೊರಹೊಮ್ಮಿದಶಬ್ದವೇ ಪ್ರಣವನಾದ ಅದು ಶಕ್ತಿಯ ಹ– ರಿಯುವಿಕೆಯಾಗಿದ್ದು ಈ ನಾದವು ಸೃಷ್ಟಿಯ ಚರಾಚರ ವಸ್ತುಗಳಲ್ಲೂ ಜೀವಿಗಳಲ್ಲೂ ಆವರಿಸಿಕೊಂಡಿದ್ದು, ಚೈತನ್ಯ(ಜಂಗಮ) ಕ್ಕೆ ಕಾರಣವಾಗಿದೆ, ಈ ಶಕ್ತಿಯು ಅಣುವಿನಲ್ಲಿ ಪರಮಾಣುಶಕ್ತಿಯಾಗಿ ಜೀವಿಗಳಲ್ಲಿ ಚೇತನವಾಗಿದ್ದು ಇದನ್ನು ವಿಜ್ಞಾನಿ ಐನ್ಸ್ಟೀನ್ ಇ=ಟಿಛಿ2 ಎಂಬ ಸೂತ್ರದಲ್ಲಿ ಸೆರೆಹಿಡಿದಿರುವುದನ್ನು 900 ವರ್ಷಗಳ ಹಿಂದೆ ಅಲ್ಲಮಪ್ರಭುಗಳು ತಮ್ಮ ವಚನಗಳಲ್ಲಿ ಹೇಳಿದ್ದಾರೆ. "ಆದಿ ಅನಾದಿಗಳಿಲ್ಲದಂದಿನ ಕೂಗು;ನಾದ ಬಿಂದು ಗಳಿಲ್ಲದಂದಿನ ಕೂಗ ಕಂಡು ಕೂಗಿದೆ ! ಇಡಾ ಪಿಂಗಳ ಸುಷುಮ್ನನಾಳಮಧ್ಯದ ಕೂಗ ಕಂಡು ಕೂಗಿದೆ. ಗುಹೇಶ್ವರನೆಂಬ ತಲೆವೊಲನ ದಾಂಟಿ ಅಲ್ಲಮ ಕೂಗಿದ ಕೂಗು".

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ವಿಜಯಪುರದಲ್ಲಿ ಬಿಜೆಪಿ ಪ್ರತಿಭಟನೆ

ಬಿಟ್ಟಿ ಭಾಗ್ಯಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯ :ಕುಚಬಾಳ

ಉದಯರಶ್ಮಿ ನ್ಯೂಸ್

ವಿಜಯಪುರ: ರಾಜ್ಯ ಕಾಂಗ್ರೆಸ್ ಸರಕಾರ ಎಸ್.ಸಿ./ಎಸ್.ಟಿ. ಸಮುದಾಯಕ್ಕೆ ಮೀಸಲಾದ ಎಸ್.ಇ.ಪಿ. ಟಿ.ಇ.ಪಿ. ಯೋಜನೆಯಲ್ಲಿನ ಅಂದಾಜು 11,600 ಕೋಟಿ ಅನುದಾನವನ್ನು ಕಡಿತ ಮಾಡಿ ಬೇರೆ ಯೋಜನೆಗಳಿಗೆ ಉಪಯೋಗಿಸಿ ಈ ಸಮುದಾಯಕ್ಕೆ ಅನ್ಯಾಯ ಮಾಡಿದ್ದನ್ನು ಖಂಡಿಸಿ ಬಿಜೆಪಿ ಜಿಲ್ಲಾ ಎಸ್.ಸಿ. ಮತ್ತು ಎಸ್.ಟಿ. ಮೋರ್ಚಾ ವತಿಯಿಂದ ಪ್ರತಿಭಟನೆ ಶುಕ್ರವಾರ ನಡೆಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ನಗರದ ಗಾಂಧಿ ಸರ್ಕಲ್‌ನಿಂದ ಪ್ರತಿಭಟನೆ ಹೊರಟು ಡಾ. ಬಿ.ಆರ್. ಅಂಬೇಡ್ಕರ್ ಸರ್ಕಲ್ ಮೂಲಕ ಜಿಲ್ಲಾಧಿಕಾರಿ ಕಚೇರಿ ವರೆಗೆ ತೆರಳಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಆರ್. ಎಸ್. ಪಾಟೀಲ ಕುಚಬಾಳ, ರಾಜ್ಯ ಕಾಂಗ್ರೆಸ್ ಸರಕಾರದ ಬಿಟ್ಟಿ ಭಾಗ್ಯ ಯೋಜನೆಗಳಿಂದ ಇಡೀ ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರಕಾರ ಅಧಿಕಾರದಲ್ಲಿದ್ದಾಗ ರೈತರಿಗೆ ಕಿಸಾನ್ ಸಮ್ಮಾನ್ ಯೋಜನೆಯಡಿ ಕೇಂದ್ರದಿಂದ ಪ್ರತಿ ವರ್ಷ 6 ಸಾವಿರ ರೂ. ರಾಜ್ಯ ಸರಕಾರದಿಂದ 4 ಸಾವಿರ ರೂ. ಸೇರಿ ಒಟ್ಟು 10 ಸಾವಿರ ದೊರೆಯುತ್ತಿತ್ತು. ಅದೇ ರೀತಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅವರ ಅವಧಿಯಲ್ಲಿ ರೈತರ ಮಕ್ಕಳಿಗೆ ರೈತ ವಿದ್ಯಾನಿಧಿ ಯೋಜನೆ ಜಾರಿಯಲ್ಲಿತ್ತು. ಇಂತಹ ಅನೇಕ ಜನಪರ ಯೋಜನೆಗಳನ್ನು ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರಕಾರ ನಿಲ್ಲಿಸಿದೆ. ಈ ಸರಕಾರ ಬಂದು 9 ತಿಂಗಳು ಗತಿಸುತ್ತ ಬಂದರೂ ಈ ವರೆಗೆ ಹೊಸ ಯೋಜನೆಗಳ ಜಾರಿಗೆ ಮುಂದಾಗಿಲ್ಲ. ಅಭಿವೃದ್ಧಿ ಶೂನ್ಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಎಸ್ ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಉಮೇಶ್ ಕಾರಜೋಳ ಮಾತನಾಡಿ, ರಾಜ್ಯದಲ್ಲಿ ಭೀಕರ ಬರದಿಂದ ಜನರು, ರೈತರು ತತ್ತರಿಸಿದ್ದಾರೆ. ಆದರೆ ಇವರ ನೆರವಿಗೆ ರಾಜ್ಯ ಸರಕಾರ ಬಾರದೇ ತಮ್ಮ ಜವಾಬ್ದಾರಿಯಿಂದ ನುಣಚಿಕೊಳ್ಳಲು ಕೇಂದ್ರ ಸರಕಾರದ ಮೇಲೆ ಗೂಬೆ ಕೂ– ರಿಸುವ ಕೆಲಸ ಮಾಡುತ್ತಿದ್ದಾರೆ. ಈ ಹಿಂದೆ ರಾಜ್ಯದಲ್ಲಿ ಅತಿವೃಷ್ಟಿ, ಅನಾವೃಷ್ಟಿ

ಆಗಿದ್ದಾಗ ಬಿಜೆಪಿ ಸರಕಾರ ರೈತರು ಸೇರಿದಂತೆ ಜನರ ನೆರವಿಗೆ ಬಂದಿತ್ತು. ಅತಿವೃಷ್ಟಿಯಲ್ಲಿ ಮನೆ ಕಳೆದುಕೊಂಡವ– ರಿಗೆ 5 ಲಕ್ಷ ರೂ. ಪರಿಹಾರ ನೀಡಿತ್ತು. ಈಗಿನ ಕಾಂಗ್ರೆಸ್ ಸರಕಾರ ಬರದಲ್ಲೂ ರಾಜಕೀಯ ಮಾಡುತ್ತಿದ್ದು, ತಮ್ಮ ಕೈಯಲ್ಲಿ ಆಗಲಾರದಕ್ಕೆ ಕೇಂದ್ರ ಸರಕಾರ ಹಾಗೂ ಪ್ರಧಾನಿ ಮೋದಿ ವಿರುದ್ಧ ಅಪಪ್ರಚಾರ ಮಾಡುತ್ತ ಕಾಲಹರಣ ಮಾಡುತ್ತಿದೆ ಎಂದರು.

ಜಿಲ್ಲಾ ಎಸ್ ಸಿ ಮೋರ್ಚಾ ಅಧ್ಯಕ್ಷರಾದ ಮಂಜುನಾಥ್ ಮೀಸೆ ಮಾತನಾಡಿ, ರಾಜ್ಯ ಸರಕಾರ ವಿವಾದಗಳನ್ನು ಸೃಷ್ಟಿಸುತ್ತ ಜನರ ಮನಸ್ಸನ್ನು ಬೇರೆಡೆ ಸೆಳೆಯುತ್ತಿದೆ. ಮುಖ್ಯಮಂತ್ರಿಗಳು ಕೂಡಲೇ ಎಚ್ಚೆತ್ತುಕೊಂಡು ಬರದಲ್ಲಿ ಜನರು ಅನುಭವಿಸುತ್ತಿರುವ ಸಂಕಷ್ಟಕ್ಕೆ ಕೂಡಲೇ ಸ್ಪಂದಿಸಬೇಕು. ಅದೇ ರೀತಿ ದಲಿತ ಸಮುದಾಯಗಳಿಗೆ ಭರವಸೆ ನೀಡಿ ಅಧಿಕಾರಕ್ಕೆ ಬಂದ ನೀವು ಅವ– ರಿಗೆ ಮೀಸಲಿಟ್ಟ ಎಸ್.ಇ.ಪಿ. ಟಿ.ಇ.ಪಿ. ಯೋಜನೆಯಲ್ಲಿನ ಅಂದಾಜು 11,600 ಕೋಟಿ ಅನುದಾನವನ್ನು ಮರಳಿ ನೀಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಎಸ್ ಟಿ ಮೋರ್ಚಾ ಜಿಲ್ಲಾ ಅಧ್ಯಕ್ಷ ರವಿಕಾಂತ ವಗ್ಗೆ ಮಾತನಾಡಿದರು.

ಈ ಸಂದರ್ಭದಲ್ಲಿ ಸಂಸದ ರಮೇಶ ಜಿಗಜಿಣಗಿ, ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ, ಮುಖಂಡ ವಿಜುಗೌಡ ಪಾಟೀಲ, ಅರುಣ ಶಹಾಪುರ, ಸಂಗಣ್ಣ ಬೆಳ್ಳುಬ್ಬಿ, ಸಂಜೀವ ಐಹೊಳ್ಳಿ, ಪ್ರಕಾಶ ಅಕ್ಕಲಕೋಟ, ಅನಿಲ ಜಮಾದಾರ, ಚಂದ್ರಶೇಖರ ಕವಟಗಿ, ಕಾಸುಗೌಡ ಬಿರಾದಾರ, ಭರತ ಕೋಳಿ, ಶೀತಲಕುಮಾರ ಓಗಿ, ಪ್ರವೀಣ ನಾಟಿಕಾರ, ರಾಜು ಮಗಿಮಠ, ಶಿವಾನಂದ ಮಖಣಾಪೂರ, ಶ್ರೀನಿವಾಸ ಕಂದಗಲ್, ಗೋಪಾಲ ಘಟಕಾಂಬಳೆ, ಚಿದಾನಂದ ಚಲವಾದಿ, ಸ್ವಪ್ನಿ ಕಣಮುಚನಾಳ, ಹಣಮಂತ ಬಿರಾದಾರ, ಗೀತಾ ಕುಗನೂರ, ಸ್ವಾಮಿ ಮಾಶ್ಯಾಳ, ಮಳನಗೌಡ ಪಾಟೀಲ, ಈರಣ್ಣ ರಾವೂರ, ಎಸ್.ಎ. ಪಾಟೀಲ, ಕೃಷ್ಣಾ ಗುನ್ಹಾಳಕರ, ವಿಜಯ ಜೋಶಿ, ರಾಜೇಶ ತವಸೆ, ಶಿವರುದ್ರ ಬಾಗಲಕೋಟ, ಜವಾಹರ ಗೋಸಾವಿ, ಪ್ರೇಮಾನಂದ ಬಿರಾದಾರ, ವಿಠ್ಠಲ ಹೊಸಪೇಟ, ಮಹೇಶ ಒಡೆಯರ್, ರಾಜು ಕುರಿಯವರ್, ಭೀಮಾಶಂಕರ ಹದನೂರ, ವಿನಾಯಕ ದಹಿಂಡೆ, ವಿಕ್ರಂ ಗಾಯಕವಾಡ, ಶ್ರೀಕಾಂತ ಶಿಂಧೆ, ಸಂದೀಪ ಪಾಟೀಲ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಮಕ್ಕಳು ಕ್ರೀಡಾಸಕ್ತಿ ಬೆಳೆಸಿಕೊಳ್ಳಬೇಕು :ಗಚ್ಚಿನಕಟ್ಟಿ

ಉದಯರಶ್ಮಿ ನ್ಯೂಸ್

ಚಡಚಣ: ನೆಹರು ಯುವಕ ಕೇಂದ್ರ, ಎಂಇಎಸ್ ಶಿಕ್ಷಣ ಸಂಸ್ಥೆ ಮತ್ತು ಸಂಗೋಳ್ಳಿ ರಾಯಣ್ಣ ಬ್ರಿಗ್ರೇಡ್ ನಿವರಗಿ ಇವರ ಸಂಂ– ಯುಕ್ತ ಆಶ್ರಯದಲ್ಲಿ ತಾಲೂಕು ಮಟ್ಟದ ಕ್ರೀಡಾಕೂಟ ಹಮ್ಮಿಕೊಳಲಾಯಿತು.

ಇದೇ ಸಂಧರ್ಭದಲ್ಲಿ ಮುಖ್ಯ ಗುರುಮಾತೆ ಗಚ್ಚಿನಕಟ್ಟಿ ಮಾತನಾಡಿ, ಮಕ್ಕಳು ಕ್ರೀಡೆಯಲ್ಲಿ ಹೆಚ್ಚಿನ ಆಸಕ್ತಿ ವಹಿಸಬೇಕು, ಕ್ರೀಡೆಯಿಂದ ಮಕ್ಕಳ ಮನಸ್ಸು ಪರಿಶುದ್ಧವಾಗುವುದು ಎಂದರು.

ಐಟಿಐ ಕಾಲೇಜಿನ ಪ್ರಾಚಾರ್ಯ ಹಿರೇಮಠ ಮಾತನಾಡಿದರು. ಸಂಸ್ಥೆಯ ಜನ ಸಂಪರ್ಕಾಧಿಕಾರಿ ಗಚ್ಚಿನಕಟ್ಟಿ ಮಾತನಾಡಿ, ಶಾರೀರಿಕ ಹಾಗೂ ಮಾನಸಿಕವಾಗಿ ಸದೃಢವಾಗಲು ಕ್ರೀಡೆ ಅತೀ ಮುಖ್ಯ ಎಂದರು.

ಮಾಳಿ ಸರ್, ಶಿಕ್ಷಕಿಯರಾದ ವೈಶಾಲಿ ಪಾಟೀಲ, ಎಮ್ ಎಸ್ ಬಿರಾದಾರ ಮುಂತಾದವರು ಉಪಸ್ಥಿತರಿದ್ದರು.

ಶಿಕ್ಷಕರಾದ ಮಾನೆ ನಿರೂಪಣೆ ಮಾಡಿದರು. ನೆಹರು ಯುವಕ ಕೇಂದ್ರದ ಸ್ವಯಂ ಸೇವಕ ಬೀರಪ್ಪ ಕಲಕುಟಗಿ ಕ್ರಾರ್ಯಕ್ರಮ ನಡೆಸಿಕೊಟ್ಟರು.

ರಂಭಾಪುರಿಶ್ರೀಗಳಿಗೆ ಅಗೌರವ ಖಂಡನೀಯ :ಜಡಿಸಿದ್ಧೇಶ್ವರ ಶ್ರೀ

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ರಂಭಾಪುರಿಶ್ರೀಗಳಿಗೆ ಅಗೌರವ ತೋರಿ, ಅಮಾನವೀಯ ರೀತಿಯಲ್ಲಿ ವರ್ತಿಸಿದ ಘಟನೆ ಅತ್ಯಂತ ಖೇದಕರ ಹಾಗೂ ಖಂಡ

ಚಿಮ್ಮಡ ಬನಶಂಕರಿದೇವಿ ಜಾತ್ರೆ ಇಂದು

ಉದಯರಶ್ಮಿ ನ್ಯೂಸ್

ಚಿಮ್ಮಡ: ಗ್ರಾಮದ ದೇವಾಂಗ ಸಮಾಜದ ಆರಾಧ್ಯ ದೇವತೆ ಶ್ರೀ ಬನಶಂಕರಿದೇವಿ ಜಾತ್ರಾ ಮಹೋತ್ಸವ ಹಾಗೂ ರಥೋತ್ಸವ ಕಾರ್ಯಕ್ರಮ ಶನಿವಾರದಂದು ವಿಜ್ರಂಭಣೆಯಿಂದ ಜರುಗಲಿದೆ.

ಬೆಳಿಗ್ಗೆ 6 ಘಂಟೆಗೆ ನಡೆಯುವ ಅಭಿಷೇಕ, ವಿಶೇಷ ಪೂಜೆಯೊಂದಿಗೆ ಪ್ರಾರಂಭಗೊಳ್ಳಲಿರುವ ಜಾತ್ರಾ ಮಹೋತ್ಸವದಲ್ಲಿ ಮದ್ಯಾಹ್ನ ಶ್ರೀ ದೇವಿಯ ಉಡಿತುಂಬುವ ಕಾರ್ಯಕ್ರಮದೊಂದಿಗೆ ಮಹಾಪ್ರಸಾದ ವಿನಿಯೋಗ ನಡೆಯಲಿದ್ದು ಮಹಾಪ್ರಸಾದದಲ್ಲಿ ಮುಂಬೈ ಮಾದೇಲಿ ಹಾಗೂ ಚಿಮ್ಮಡದ ವಿಶೇಷ ಕಿಚಡಿ ಪ್ರಸಾದ ಇರಲಿದೆ, ಸಂಜೆ 5 ಘಂಟೆಗೆ ಜರುಗಲಿರುವ ರಥೋತ್ಸವ ಕಾರ್ಯಕ್ರಮದಲ್ಲಿ ಈ ಭಾಗದ ಜನಪದ ವಾದ್ಯವೃಂದಗಳಾದ ಕರಡಿ ಮಜಲು, ಡೊಳ್ಳು ಕುಣಿತ, ಬಾಜಾ ಬಜಂತ್ರಿ ಸೇರಿದಂತೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ.

ಜನಪದೋತ್ಸವ ಕಾರ್ಯಕ್ರಮ; ರಾತ್ರಿ 10 ಗಂಟೆಗೆ ಶ್ರೀ ಬನಶಂಕರಿದೇವಿ ಸಾಂಸ್ಕೃತಿಕ ವೇದಿಕೆ ಹಾಗೂ ಶ್ರೀ ಬನಶಂಕರಿದೇವಿ ದೇವಸ್ಥಾನ ಸಮೀತಿ ಚಿಮ್ಮಡ ಇವರ ಸಂಯುಕ್ತ ಆಶ್ರಯದಲ್ಲಿ ರಾಜ್ಯ ಪ್ರಶಸ್ತಿ ವಿಜೇತ ಖ್ಯಾತ ಜನಪದ ಗಾಯಕ ವೀರಣ್ಣ ಅಂಗಡಿ ಹಾಗೂ ಶ್ರೀ ಸಿದ್ದಲಿಂಗೇಶ್ವರ ಹಾಸ್ಯ ಮತ್ತು ಜನಪದ ಕಲಾಸಂಘ ಅಡವಿಸೋಮಾಪೂರ ಇವರ ಜಂಟಿ ನೇತ್ರತ್ವದಲ್ಲಿ "ಜನಪದೋತ್ಸವ" ಕಾರ್ಯಕ್ರಮ ನಡೆಯಲಿದೆ.

ಈ ಕಾರ್ಯಕ್ರಮದ ಸಾನಿಧ್ಯವನ್ನು ಸ್ಥಳಿಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು, ಶ್ರೀ ಜನಾರ್ಧನ ಮಹಾರಾಜರು ವಹಿಸಲಿದ್ದಾರೆ, ಅಧ್ಯಕ್ಷತೆಯನ್ನು ಚಂದ್ರಕಾಂತ ಜಾಡಗೌಡರ ವಹಿಸುವರು. ಉದ್ಘಾಟನೆಯನ್ನು ಶಾಸಕ ಸಿದ್ದು ಸವದಿ ನೆರವೇರಿಸಲಿದ್ದಾರೆ, ಮುಖ್ಯ ಅಥಿತಿಗಳಾಗಿ ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ, ಕಾಂಗ್ರೇಸ್ ಮುಖಂಡ ಸಿದ್ದು ಕೊಣ್ಣೂರ, ಜಿ.ಪಂ. ಮಾಜಿ ಸದಸ್ಯ ಬಾಬಾಗೌಡ ಪಾಟೀಲ, ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಮಾಲಾ ಅಶೋಕ ಮೋಟಗಿ, ಉಪಾಧ್ಯಕ್ಷೆ ಶ್ರೀಮತಿ ಪ್ರೇಮಾ



ಗೋವಿಂದಗೋಳ, ಪರಶುರಾಮ ಬಸವ್ವಗೋಳ, ಗಿರಮಲ್ಲಪ್ಪ ಹಟ್ಟಿ, ಅಶೋಕ ಧಡೂತಿ, ಸಂಕಪ್ಪಾ ಮುನ್ನೋಳಿ, ರಾಮಣ್ಣ ಮುಗಳಖೋಡ, ಬಾಳಪ್ಪಾ ಹಳಿಂಗಳಿ, ಪುಂಡಲಿಕಪ್ಪಾ ಪೂಜಾರಿ, ರಾಮಣ್ಣ ಬಗನಾಳ, ಕೆಪಿಟಿಸಿಎಲ್ ಸ, ಕಾರ್ಯನಿರ್ವಾಹಕ ಅಧಿಕಾರಿ ಮಹಾಲಿಂಗಪ್ಪ ಧಡೂತಿ, ಪ್ರಭು ಮುಧೋಳ, ಪಿಕೆಪಿಎಸ್ ಅಧ್ಯಕ್ಷ ಶಂಕರ ಬಟಕುರ್ಕಿ, ಪರಪ್ಪ ಪಾಲಭಾವಿ, ಬೀರಪ್ಪಾ ಹಳೆಮನಿ, ವಿಜಯ ಪೂಜಾರಿ, ಮನೋಜ ಹಟ್ಟಿ, ಬಸವರಾಜ ಕುಂಚನೂರ ಸೇರಿದಂತೆ ಹಲವಾರು ಜನ ಪ್ರಮುಖರು ಆಗಮಿಸಲಿದ್ದು ಇದೇ ಸಂಧರ್ಬದಲ್ಲಿ ಹಲವಾರು ಸಾಧಕರನ್ನು ಸತ್ಕರಿಸುವ ಕಾರ್ಯಕ್ರಮ ನಡೆಯಲಿವೆಯಂದು ಶ್ರೀ ಬನಶಂಕರಿದೇವಿ ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷರು ತಿಳಿಸಿದ್ದಾರೆ.

ಮೋರಟಗಿಯಲ್ಲಿ ಜಂಗಿ ನಿಕಾಲಿ ಕುಸ್ತಿ । ಪ್ರೊ.ಅರವಿಂದ ಮನಗೂಳಿ ಅಭಿಮತ

ಸೋಲು–ಗೆಲುವು ಸಮನಾಗಿ ಸ್ವೀಕರಿಸಬೇಕು

ಉದಯರಶ್ಮಿ ನ್ಯೂಸ್

ಸಿಂದಗಿ: ಕ್ರೀಡಾಪಟುಗಳು ಸೋಲು ಗೆಲುವನ್ನು ಸಮನಾಗಿ ಸ್ವೀಕರಿಸಬೇಕು ಎಂದು ಪ್ರೊಫೆಸರ್ ಅರವಿಂದ ಮನಗೂಳಿ ಹೇಳಿದರು.

ಹಜರತ್ ಮಿಟ್ಟೆವಾಲಿ ಉರುಸು ನಿಮಿತ್ತ ಗ್ರಾಮದಲ್ಲಿ ಗುರುವಾರ ಸಂಜೆ ಹಮ್ಮಿಕೊಂಡಿದ್ದ ಜಂಗಿ ನಿಕಾಲಿ ಕುಸ್ತಿ ಪಂದ್ಯಾವಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಆಟೋಟಗಳಲ್ಲಿ ಗೆದ್ದಾಗ ಅತಿಯಾಗಿ ಹಿಗ್ಗಬಾರದು. ಸೋತಾಗ ಕುಗ್ಗಬಾರದು. ಸೋಲು ಗೆಲುವಿನ ಮೆಟ್ಟಿಲು ಎಂಬುದನ್ನು

ಮರೆಯಬಾರದು. ಯುವ ಜನತೆ ವಿದೇಶಿ ಕ್ರೀಡೆಗಳಿಂದ ಸ್ವದೇಶಿ ಆಟಗಳನ್ನು ಹೆಚ್ಚು ಪ್ರೀತಿಸಬೇಕು ಎಂದರು.

ಕ್ರೀಡೆಗಳು ಬಾಂಧವ್ಯ ಬೆಸೆಯಲು ಸೂಕ್ತ ವೇದಿಕೆಯಾಗಿವೆ. ಹಜರತ್ ಮಿಟ್ಟೆವಾಲಿ ಜಾತ್ರೆ ಸಮಿತಿಯವರು ಕರ್ನಾಟಕ ಮತ್ತು ಮಹಾರಾಷ್ಟ್ರದ ಪ್ರಸಿದ್ಧ ಪೈಲ್ವಾನರನ್ನು ಕರೆಸಿ ಕುಸ್ತಿ ಪಂದ್ಯಾವಳಿ ಆಯೋಜಿಸಿ ವಿಜೇತರಿಗೆ ನಗದು ಬಹುಮಾನ ಹಾಗೂ ಸೋತವರಿಗೆ ಸಮಾಧಾನಕರ ಬಹುಮಾನ ನೀಡಿ ದೇಶಿ ಕ್ರೀಡೆಗಳನ್ನು ಪ್ರೋತ್ಸಾಹಿಸುತ್ತಿದ್ದಾರೆ. ಸೌಹಾರ್ದ ಮೂಡಿಸುವ ಇಂಥ ಆಟಗಳನ್ನು ಉತ್ಸವಗಳಲ್ಲಿ ನಡೆಸುತ್ತಿರುವುದು ಶ್ಲಾಘನೀಯ. ಸಿಂದಗಿ ತಾಲೂಕಿನಲ್ಲೇ ಕುಸ್ತಿ ಆಯೋಜನೆಗೆ ಮೋರಟಗಿ ಗ್ರಾಮ ಹೆಸರುವಾಸಿಯಾಗಿದೆ ಎಂದರು.

"ವರ್ಷದ ಹನ್ನೆರಡು ತಿಂಗಳೂ ಜಾತ್ರೆ ನಡೆಯುವ ಜಾತ್ಯತೀತ ಗ್ರಾಮ ನಮ್ಮದಾಗಿದೆ. ಗ್ರಾಮದ ಎಲ್ಲ ಸಮುದಾಯದವರೂ ಉತ್ಸವಗಳಲ್ಲಿ ಸೌಹಾರ್ದದಿಂದ ಭಾಗವಹಿಸುತ್ತಾರೆ. ಎಲ್ಲ ಗ್ರಾಮಸ್ಥರ ಸಹಕಾರದಿಂದ ದೊಡ್ಡ ಮಟ್ಟದ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗುತ್ತಿದೆ. ಮುಂದಿನ ವರ್ಷ ಭಾರತ ಕೇಸರಿ ಹಾಗೂ ಪಂಜಾಬ್ ಕೇಸರಿ ಪೈಲ್ವಾನರನ್ನು ಕರೆಸಿ ಕುಸ್ತಿ ಹಮ್ಮಿಕೊಳ್ಳಲು ಯೋಜನೆ ರೂಪಿಸಲಾಗಿದೆ."

– ಮೈಬೂಬಸಾಬ್ ಕಣ್ಣಿ
ಅಂಜುಮನ್ ಕಮೀಟಿ ಕಾರ್ಯದರ್ಶಿ, ಮೋರಟಗಿ

ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯ ಎನ್.ಆರ್.ತಿವಾರಿ, ಮೈಬೂಬಸಾಬ್ ಕಣ್ಣಿ, ಪ್ರಕಾಶ ಅಡಗಲ್, ರಜಾಕ್ ಬಾಗವಾನ, ಶಿವರಾಯ ಹಿಪ್ಪರಗಿ, ಅಬ್ಬಾಸಲಿ ಬಳೂರಗಿ, ಸಲೀಮ್ ಕಣ್ಣಿ, ದತ್ತಪ್ಪ ಬಳಗುಂಪಿ, ಅಬ್ಬಾಸಲಿ ಬಂಟನೂರ, ರಜಾಕಸಾಬ್ ಮುಲ್ಲಾ, ದಾವಲಸಾಬ್ ಮುಲ್ಲಾ ಹಾಗೂ ಸುತ್ತಲಿನ ಗ್ರಾಮಸ್ಥರು ಇದ್ದರು.

ಗೆಲುವಿನ ನಗೆ ಬೀರಿದ ಕಾರ್ತಿಕ್

ಮಹಾರಾಷ್ಟದ ಚಾಂಪಿಯನ್ ವಿಲಾಸ ದೋಯಿಪಡೆ ಹಾಗೂ ಕರ್ನಾಟಕ ಕೇಸರಿ ಕಾರ್ತಿಕ್ ಕಾಟೆ ನಡುವೆ ನಡೆದ ಫೈನಲ್‌ನಲ್ಲಿ ಕಾರ್ತಿಕ್ ಕಾಟೆ ಗೆಲುವಿನ ನಗೆ ಬೀರಿ 2 ಲಕ್ಷ ರೂ. ಬಹುಮಾನ ತಮ್ಮದಾಗಿಸಿಕೊಂಡರು. ಕ್ಷಣ ಕ್ಷಣಕ್ಕೂ ರೋಚಕವಾಗಿದ್ದ ಪಂದ್ಯವನ್ನು ನೂರಾರು ಜನ ತುದಿಗಾಲ ಮೇಲೆ ನಿಂತು ವೀಕ್ಷಿಸಿದರು.

ಗಮನ ಸೆಳೆದ ಮಹಿಳಾ ಕುಸ್ತಿ

ಸರ್ಕಾರಿ ಕನ್ನಡ ಶಾಲೆ ಆವರಣದಲ್ಲಿ ನಡೆದ ಮಹಿಳಾ ಕುಸ್ತಿ ಪಂದ್ಯಾವಳಿಗಳನ್ನು ಗ್ರಾಮಸ್ಥರು ಕುತೂಹಲದಿಂದ ವೀಕ್ಷಿಸಿದರು. ಮಹಾರಾಷ್ಟದ ಇಬ್ಬರು ಸೇರಿ ಒಟ್ಟು ನಾಲ್ಕು ಮಹಿಳಾ ಕುಸ್ತಿ ಪಟುಗಳು ಪಂದ್ಯಗಳಲ್ಲಿ ಭಾಗವಹಿಸಿದ್ದರು. ರೋಚಕ ಹಣಾಹಣಿಯಲ್ಲಿ ಧಾರವಾಡದ ಪೈಲ್ವಾನ್ ಸಂಗೀತಾ ಅವರು ಎಲ್ಲ ಸ್ಪರ್ಧಿಗಳನ್ನು ಸೋಲಿಸಿ 35 ಸಾವಿರ ರೂ. ಬಹುಮಾನ ಗಳಿಸಿ ಗೆಲುವಿನ ನಗೆ ಬೀರಿದರು.

ಮಾ.1 ರಿಂದ ದ್ವಿತೀಯ ಪಿಯುಸಿ ಪರೀಕ್ಷೆ । ಜಿಲ್ಲೆಯಲ್ಲಿ 59 ಪರೀಕ್ಷೆ ಕೇಂದ್ರಗಳು । ಒಟ್ಟು 31,921 ವಿದ್ಯಾರ್ಥಿಗಳು

ಸುಸೂತ್ರವಾಗಿ ಪರೀಕ್ಷೆ ನಡೆಸಲು ಎಡಿಸಿ ಮುರಗಿ ಸೂಚನೆ

ಉದಯರಶ್ಮಿ ನ್ಯೂಸ್

ವಿಜಯಪುರ: ಜಿಲ್ಲಾದ್ಯಂತ ಮಾರ್ಚ 1 ರಿಂದ 22ರ ವರೆಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ನಡೆಯಲಿದ್ದು, ವ್ಯವಸ್ಥಿತ ಮತ್ತು ಸುಸೂತ್ರವಾಗಿ ಪರೀಕ್ಷೆ ನಡೆಸುವಂತೆ ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ ಅವರು ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯ ಪೂರ್ವಸಿದ್ಧತಾ ಸಭೆಯಲ್ಲಿ ಅವರು, ಜಿಲ್ಲೆಯ 59 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಒಟ್ಟು 31,921 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪರೀಕ್ಷಾ ದಿನಗಳಂದು ಜಿಲ್ಲಾ ಭದ್ರತಾ ಕೊಠಡಿಯಿಂದ ಗೌಪ್ಯ ಬಂಡಲ್ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆ ರವಾನಿಸಲು 22 ರೂಟ್‌ಗಳನ್ನು ಮಾಡಲಾಗಿದೆ. ತಹಶೀಲ್ದಾರರು, ಉಪ

ತಹಶೀಲ್ದಾರರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸರ್ಕಾರಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರು, ಹಿರಿಯ ಉಪನ್ಯಾಸಕರನ್ನೊಳಗೊಂಡ ತ್ರಿ–ಸದಸ್ಯ ಸಮಿತಿ ರಚಿಸಿಲಾಗಿದೆ. ತ್ರಿ–ಸದಸ್ಯ ಸಮಿತಿ ಸದಸ್ಯರು ತಮಗೆ ವಹಿಸಿದ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಅವರು ಸೂಚಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳ ಅನುಕೂಲಕ್ಕಾಗಿ ಕುಡಿಯುವ ನೀರು, ವಿದ್ಯುತ್ ಸೌಕರ್ಯ, ಶೌಚಾಲಯ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳ ಕುರಿತು ಮುಂಚಿತವಾಗಿ ಪರಿಶೀಲನೆ ಮಾಡಬೇಕು. ಪರೀಕ್ಷಾ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ಸಮಸ್ಯೆಯಾಗದಂತೆ ನೋಡಿಕೊಳ್ಳಲು ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಎಡಿಸಿ ಸೂಚನೆ ನೀಡಿದರು.

ಪರೀಕ್ಷೆಗಳು ಅತೀ ಸೂಕ್ಷ್ಮವಾದ ಪ್ರಕ್ರಿಯೆಯಾಗಿದ್ದು, ಈ ನಿಟ್ಟಿನಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷೆ ಕೇಂದ್ರಗಳಿಗೆ ನಿಗದಿತ ಅವಧಿಯೊಳಗೆ ತಲುಪಿಸಬೇಕು. ಪ್ರಶ್ನೆ ಪತ್ರಿಕೆಗಳನ್ನು ತೆಗೆದುಕೊಂಡು ಹೋಗುವ ವಾಹನಗಳಿಗೆ ಜಿಪಿಎಸ್ ಅಳವಡಿಕೆ, ನಿಗದಿತ ಮಾರ್ಗದಲ್ಲಿ ಚಲಿಸಿ, ನಿಖರ ಸಮಯಕ್ಕೆ ತಲುಪಿಸಬೇಕು. ಪರೀಕ್ಷೆ ಕರ್ತವ್ಯಕ್ಕೆ ನಿಯೋಜಿತ ಅಧಿಕಾರಿ ಮತ್ತು ಸಿಬ್ಬಂದಿ ಸಮನ್ವಯದಿಂದ ಕಾರ್ಯನಿರ್ವಹಿಸಿ, ಪರೀಕ್ಷೆಯ ನಿಗದಿತ ಸಮಯಕ್ಕೆ ಮುಂಚಿತವಾಗಿ ಹಾಜರಿರಬೇಕು. ಪರೀಕ್ಷಾ ಕೇಂದ್ರದಲ್ಲಿ ಕಾರ್ಯನಿರ್ವಹಿಸುವವರು ಕಡ್ಡಾಯವಾಗಿ ಗುರುತಿನ ಚೀಟಿ ಧರಿಸಿರಬೇಕು ಎಂದು ಅವರು ಸೂಚನೆ ನೀಡಿದರು.

ಎಲ್ಲ ಕೊಠಡಿಗಳಿಗೆ ಕಡ್ಡಾಯವಾಗಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು. ಕೊಠಡಿ ಮೇಲ್ವಿಚಾರಕರು ಅತ್ಯಂತ ಎಚ್ಚರಿಕೆಯಿಂದ, ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು. ಪರೀಕ್ಷೆಗಳು ಅತ್ಯಂತ ಸುಸೂತ್ರವಾಗಿ ನಡೆಸಲು ಎಲ್ಲ ಅಗತ್ಯ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಅವರು ಸೂಚನೆ ನೀಡಿದರು.

ಈ ಸಭೆಯಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶಂಕರ್ ಮಾರಿಹಾಳ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಸಿ.ಕೆ.ಹೊಸಮನಿ, ಪ್ರಾಂಶುಪಾಲರಾದ ಕೆ.ಎ.ಉಪ್ಪಾರ, ಜಿಲ್ಲೆಯ ತಹಸೀಲ್ದಾರರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಪ್ರಶ್ನೆ ಪತ್ರಿಕೆ ವಿತರಣಾ ತಂಡದ ಪ್ರಾಚಾರ್ಯರು ಹಾಗೂ ಉಪನ್ಯಾಸಕರು, ಪರೀಕ್ಷಾ ಉಪ ಮುಖ್ಯ ಅಧೀಕ್ಷಕರು ಉಪಸ್ಥಿತರಿದ್ದರು.

ತೊಗರಿ: ರೂ.85.50 ಕೋಟಿ ಬೆಳೆ ವಿಮೆ ಬಿಡುಗಡೆ

ಉದಯರಶ್ಮಿ ನ್ಯೂಸ್

ವಿಜಯಪುರ: ಕರ್ನಾಟಕ ಸರ್ಕಾರ 2023–2024ನೇ ಸಾಲಿನ ಮುಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ–ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಮಿಡ್ ಸೀಸನ್ ಅಡ್ವರ್ಸಿಟಿ ಇನ್ಶೂಕ್ ಅಧಿಸೂಚನೆ ಹೊರಡಿಸಿದೆ. ಜಿಲ್ಲೆಯಲ್ಲಿ 13 ತಾಲೂಕಿನ ಮಳೆಯಾಶ್ರಿತ ತೊಗರಿಗೆ ಬೆಳೆ ವಿಮೆ ಮಾಡಿಸಿದ ರೈತರಿಗೆ ವಿಮಾ ನಷ್ಟದ ಪರಿಹಾರದಲ್ಲಿ 25% ಹಣವನ್ನು ರೈತರಿಗೆ ನೀಡಲು ಸರ್ಕಾರ ಆದೇಶ ಹೊರಡಿಸಲಾಗಿತ್ತು. ಅದರಂತೆ ಜಿಲ್ಲೆಯ ತೊಗರಿ ಬೆಳೆದ ರೈತರ ಖಾತೆಗೆ 85.50 ಕೋಟಿ ಬೆಳೆಗೆ ವಿಮೆ ಹಣವನ್ನು ಬಿಡುಗಡೆ ಮಾಡಲಾಗಿದೆ ಎಂದು ವಿಜಯಪುರ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಲವು ದುರ್ಘಟನೆಗಳು.. ಕಾರಣ ಒಂದೇ

ವೀಣಾಂತರಂಗ

–ವೀಣಾ ಎಚ್. ಪಾಟೀಲ್, ಮುಂಡರಗಿ

ಘಟನೆ ಒಂದು... ಕೆಲವು ವರ್ಷಗಳ ಹಿಂದೆ ಪೇಪರಿನಲ್ಲಿ ಓದಿದ ಸಂಗತಿ. ನೂತನ ವಿವಾಹಿತ ದಂಪತಿಗಳು ಪ್ರಥಮ ರಾತ್ರಿಯ ಕೋಣೆಯಲ್ಲಿಯೇ ಮರುದಿನ ಮುಂಜಾನೆ ಶವವಾಗಿ ದೊರೆತದ್ದು.

ಘಟನೆ ಎರಡು... ಕೆಲವು ವರ್ಷಗಳ ಹಿಂದೆ ದೆಹಲಿಯಲ್ಲಿ ವಿಪರೀತ ಮಳೆಯಾದಾಗ ಕಾರಿನ ಟೈರಿನವರೆಗೆ ನೀರು ತುಂಬಿದ ಸಮಯದಲ್ಲಿ ಅದರಲ್ಲಿದ್ದ ಜೋಡಿಗಳ ಸಾವು.

ಘಟನೆ ಮೂರು.. ವಸತಿ ಶಾಲೆಯೊಂದರಲ್ಲಿ ಓದುತ್ತಿದ್ದ ವಿದ್ಯಾರ್ಥಿನಿ ಸ್ನಾನದ ಕೋಣೆಯಲ್ಲಿ ಸಾವನ್ನಪ್ಪಿರುವುದು.

ಮೇಲಿನ ಎಲ್ಲ ಘಟನೆಗಳಿಗೆ ಕಾರಣವಾಗಿರುವುದು ಕಾರ್ಬನ್ ಮೋನಾಕ್ಸೈಡ್ ಎಂಬ ವಿಷಾನಿಲ.

ಮೊದಲೆರಡು ಘಟನೆಗಳಲ್ಲಿಯೂ ಕಾರ್ಬನ್ ಮೋನಾಕ್ಸೈಡ್ ವಿಲೇವಾರಿಗೆ ಸೂಕ್ತ ಅವಕಾಶವಿಲ್ಲದೆ ಹೋದದ್ದು. ಸಂಪೂರ್ಣ ಕಿಟಕಿ ಬಾಗಿಲುಗಳನ್ನು ಮುಚ್ಚಿದ್ದುದು ಮೊದಲ ಆಕಸ್ಮಿಕ ಘಟನೆಯ ಕಾರಣವಾದರೆ, ಎರಡನೆಯ ಘಟನೆಯಲ್ಲಿ ಕಾರಿನ ಎಸಿ ವೆಂಟ್ನಲ್ಲಿ ನೀರು ತುಂಬಿದ್ದು ವಿಷಾನಿಲ ಹೊರಗೆ ಹೋಗಲು ಅವಕಾಶವಾಗದೆ ಹೋದದ್ದು.

ಪ್ರತಿದಿನ ವಾಟ್ಸಪ್ ನಲ್ಲಿ ತಪ್ಪದೇ ಮೆಸೇಜ್ ಕಳುಹಿಸುವ ಸ್ನೇಹಿತೆಯಿಂದ ನಾಲ್ಕಾರು ದಿನಗಳಾದರೂ ಒಂದೇ ಒಂದು ಮೆಸೇಜ್ ಇಲ್ಲದಿರುವುದನ್ನು ನೋಡಿ ಆಕೆಗೆ ಫೋನ್ ಮಾಡಿದೆ. ಆಗ ಫೋನ್ನಲ್ಲಿ ಆಕೆ ತಿಳಿಸಿದ್ದು ಇಷ್ಟು.

ಮಧ್ಯಾಹ್ನ 2 ಗಂಟೆಯ ಸುಮಾರಿಗೆ ಸ್ನಾನಕ್ಕೆ ಹೋದ ಮಗ ಎರಡು ಇಪ್ಪತ್ತೈದು ಆದರೂ ಹೊರಗೆ ಬಾರದಿದ್ದಾಗ... ಆತನನ್ನು ಕರೆಯಲು ಹೋದ ತಾಯಿ ಅದೆಷ್ಟೇ ಬಾಗಿಲು ಬಡಿದರೂ ಮಗನಿಂದ ಪ್ರತಿಕ್ರಿಯೆ ಬರಲಿಲ್ಲ. ಅನುಮಾನದಿಂದ ಮನೆಯ ಹಿಂಭಾಗಕ್ಕೆ ಹೋಗಿ ಬಚ್ಚಲು ಮನೆಯ ವೆಂಟಿಲೇಟರ್ನಲ್ಲಿ ಇಣುಕಿ ನೋಡಿದಾಗ ಅವರ ಮಗ ಚಿಕ್ಕಮಕ್ಕಳು ಮಲಗಿದಂತೆ ಮೊಣಕಾಲ ಮೇಲೆ ಬೋರಲು ಮಲಗಿದ್ದನ್ನು ನೋಡಿದರು. ಅದೆಷ್ಟೇ ಕರೆದರೂ ಓಗೊಡದ ಮಗನನ್ನು ತಾಯಿ ಜೋರಾಗಿ ಕೂಗಿ ಕರೆದಾಗ ಅಕ್ಕ ಪಕ್ಕದ ಮನೆಗಳ ಜನರೆಲ್ಲ ಸೇರಿದರು.

ಅದರಲ್ಲಿ ಓರ್ವ ವ್ಯಕ್ತಿ ಕೊಲೊಂದರಿಂದ ಬಚ್ಚಲು ಮನೆಯ ಬಾಗಿಲ ಚಿಲಕವನ್ನು ಸರಿಸಿದರು. ಕೂಡಲೇ ಬಚ್ಚಲು ಮನೆಗೆ ಧಾವಿಸಿದ ತಾಯಿ ಮತ್ತು ಪಕ್ಕದ ಮನೆಯ ಸ್ನೇಹಿತರು ಆತನನ್ನು ಹೊರಗೆ ಕರೆತಂದು

ಬಟ್ಟೆ ಹಾಕಿ ಆತನನ್ನು ಹೆಗಲ ಮೇಲೆ ಹೊತ್ತು ಶೀಘ್ರವೇ ಆಸ್ಪತ್ರೆಗೆ ಧಾವಿಸಿದರು. ಆತನ ಬಿಗಡಾಯಿಸಿದ ಪರಿಸ್ಥಿತಿಯನ್ನು ಕಂಡು ಆಸ್ಪತ್ರೆಯಲ್ಲಿ ಆತನನ್ನು ದಾಖಲು ಮಾಡಿಕೊಳ್ಳದೆ ಹೋದಾಗ ಮತ್ತೊಂದು ಆಸ್ಪತ್ರೆಯಲ್ಲಿಯೂ ಅವರಿಗೆ ದಾಖಲಾತಿ ದೊರೆಯಲಿಲ್ಲ. ಆತನಿಗೆ ಕೊಂಚಮಟ್ಟಿನ ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲೆಯ ಪ್ರತಿಷ್ಠಿತ ಆಸ್ಪತ್ರೆಯೊಂದಕ್ಕೆ ಕಳುಹಿಸಿಕೊಟ್ಟರು. ಅಲ್ಲಿ ಹೆಚ್ಚಿನ ಪ್ರಮಾಣದ ಆಕ್ಸಿಜನ್ ಹರಿವನ್ನು ಆತನ ದೇಹಕ್ಕೆ ಚಿಕಿತ್ಸೆಯ ಮೂಲಕ ನೀಡಲಾಯಿತಾದರೂ ವೈದ್ಯರು

ಕೇವಲ 20 ಶೇಕಡಾ ಬದುಕುವ ಭರವಸೆಯನ್ನು ನೀಡಿದರು. ಮುಂದಿನ ಮೂರು ಗಂಟೆಯ ಕಾಲ ಅಗ್ನಿಪರೀಕ್ಷೆಯನ್ನು ಎದುರಿಸಿದ ಪಾಲಕರಿಗೆ ವೈದ್ಯರು ಸಂಜೆಯ ಹೊತ್ತಿಗೆ ಕೈ ಕಾಲುಗಳಲ್ಲಿ ಕೊಂಚ ಚಲನೆ ಕಂಡು ಬಂದ ಕಾರಣ ಶೀಘ್ರವೇ ದೇಹದ ಇನ್ನುಳಿದ ಯಾವ ಯಾವ ಭಾಗಗಳಲ್ಲಿ ಕಾರ್ಬನ ಮೋನಾಕ್ಸೈಡ್

ಇಷ್ಟಾರ್ಥ ಪೂರೈಸುವ ದಾನಮ್ಮ :ಡಾ.ಮಲ್ಲಿಕಾರ್ಜುನ ಶ್ರೀ

ಉದಯರಶ್ಮಿ ನ್ಯೂಸ್

ಸಿಂದಗಿ: ಜಗತ್ತಿಗೆ ದಾನದ ಮಹಿಮೆಯನ್ನು ಸಾರಿ ಲಿಂಗಮ್ಮ ದಾನಮ್ಮಳಾಗಿ ಬೇಡಿದ ವರ ಕರುಣಿಸುವ ವರದಾನೇಶ್ವರಿ ಎಂದೇ ಪ್ರಸಿದ್ಧಿಯಾಗಿರುವ ಗುಡ್ಡಾಪುರ ದಾನಮ್ಮದೇವಿ ಭಕ್ತರ ಎಲ್ಲ ಇಷ್ಟಗಳನ್ನು ಪೂರೈಸಿದ್ದಾಳೆ ಎಂದು ಕಾಶಿ ಪೀಠದ ಜಗದ್ಗುರು ಡಾ.ಮಲ್ಲಿಕಾರ್ಜುನ ವಿಶ್ವರಾಧ್ಯ ಶಿವಾಚಾರ್ಯ ಭಗವತ್ಪಾದಂಗಳ ಹೇಳಿದರು.

ಪಟ್ಟಣದ ಸಾರಂಗಮಠದಲ್ಲಿ ನೂತನವಾಗಿ ನಿರ್ಮಾಣವಾದ ಗುಡ್ಡಾಪುರ ದಾನಮ್ಮ ದೇವಿ ಹಾಗೂ ಸೋಮನಾಥ–ೀಶ್ವರ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಕಾರ್ಯವನ್ನು ನೆರವೇರಿಸಿ ಮಾತನಾಡಿದ ಅವರು, ಕಲ್ಯಾಣ ಕ್ರಾಂತಿಯ ನಂತರ ಶರಣರ ವಚನಗಳನ್ನು ಕಾಪಾಡುವ, ಪ್ರಸಾರ ಮಾಡುವ ಕಾರ್ಯವನ್ನು ಮಾಡಿದವಳು ಗುಡ್ಡಾಪುರ ದಾನಮ್ಮ ದೇವಿ ಶಿವ ಶರಣರ ಸಂಸ್ಕೃತಿಯಿಂದ ಬೆಳೆದು ಬಂದ ಲಿಂಗಮ್ಮಳು, ದಿನದಲಿತರ ಸೇವೆಯನ್ನು ಮನಗಂಡ ಬಸವಣ್ಣನವ–ರಿಂದ ದಾನಮ್ಮಳಾಗಿ ಪ್ರಖ್ಯಾತಿಯನ್ನು ಹೊಂದಿದಳು. ತನಗೆ ನಂಬಿ ಬಂದ ಭಕ್ತರನ್ನು ಉದ್ದರಿಸುತ್ತಾ ಬಂದಿದ್ದಾಳೆ. ಇದೀಗ ಸಿಂದಗಿಯಲ್ಲಿಯೂ ನೆಲೆಗೊಂಡಿದ್ದಾಳೆ ಎಂದರು.

ಮೂರ್ತಿ ಪ್ರಾಣ ಪ್ರತಿಷ್ಠಾಪನೆಯ ಪೂಜಾ ಕಾರ್ಯದಲ್ಲಿ ಶ್ರೀಶೈಲದ ವೀರಶೈವ ಗುರುಕುಲ ವೇದ ಸಂಸ್ಕೃತ ಪಾಠ ಶಾಲೆಯ ಚಂದ್ರಶೇಖರ ಶಿವಾಚಾರ್ಯರು, ಮಲ್ಲಿಕಾರ್ಜುನ ಸ್ವಾಮಿಗಳ ಶಿಷ್ಯ ಬಳಗ, ಶಿವಶಂಕರ ಶಾಸ್ತ್ರಿ, ದಿವಾಕರ ಸ್ವಾಮಿ, ವಿಜಯಕುಮಾರ್ ಸ್ವಾಮಿ, ಮಂಜುನಾಥ ಸ್ವಾಮಿ, ರವಿಶಂಕರ ಸ್ವಾಮಿ, ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ, ಗುಡ್ಡಾಪುರದ ಗುರುಪಾದೇಶ್ವರ ಶಿವಾಚಾರ್ಯರು, ಶಹಾಪುರದ ಸೂಗರೇಶ್ವರ ಶಿವಾಚಾರ್ಯರು, ಸಿಂದಗಿ ಊರಣ ಹಿರಿಯ ಮಠದ ಶಿವಾನಂದ ಶಿವಾಚಾರ್ಯರು, ಜಮಖಂಡಿಂ–ಯ ಕೊಣ್ಣೂರಿನ ಹೊರಗಿನ ಮಠದ ಡಾ.ವಿಶ್ವ ಪ್ರಭುದೇವ ಶಿವಾಚಾರ್ಯರು, ಕನ್ನೊಳ್ಳಿಯ ಸಿದ್ದಲಿಂಗ ಶಿವಾಚಾರ್ಯರು, ಕಲಕೇರಿ ಗದ್ದಿಗೆಮಠದ ಮಡಿವಾಳೇಶ್ವರ ಶಿವಾಚಾರ್ಯರು, ಅಶೋಕ ವಾರದ, ಗಂಗಾಧರ ಜೋಗುರ, ರವಿ ಗೋಲಾ, ವೀರೇಶ ಜೋಗುರ, ಶರಣಬಸವ ಜೋಗುರ, ಚೆನ್ನಪ್ಪ ಕತ್ತಿ, ಬಸವರಾಜ ಮಕ್ಕಳಮೇಲಿ, ಎಂ.ಎಸ್. ಹಯ್ಯಾಳಕರ ಸೇರಿದಂತೆ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು, ಶ್ರೀ ಪದ್ಮರಾಜ ವಿದ್ಯಾವರ್ಧಕ ಸಂಸ್ಥೆಯ ವಿವಿಧ ಅಂಗ ಸಂಸ್ಥೆಗಳ ಪ್ರಾಚಾರ್ಯರು, ಉಪನ್ಯಾಸಕರು, ಸಿಬ್ಬಂದಿಗಳು, ವಿದ್ಯಾರ್ಥಿಗಳು ಮತ್ತು ಶ್ರೀಮಠದ ಭಕ್ತರು ಉಪಸ್ಥಿತರಿದ್ದರು. ಈ ವೇಳೆ 3000ಕ್ಕೂ ಹೆಚ್ಚು ಮುತ್ತೈದೆಯರಿಗೆ ಉಡಿ ತುಂಬಲಾಯಿತು.

ಆತಂಕ ಮೂಡಿಸಿದ್ದ ಮೊಸಳೆ ಸೆರೆ

ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ತಾಲೂಕಿನ ಮಾದಿನಾಳ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದ್ದ ಮೊಸಳೆಯನ್ನು ಅರಣ್ಯ ಇಲಾಖೆಯ ತಂಡ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದೆ.

ಗ್ರಾಮದ ಈಶ್ವರ ಹಿರೇಮಠ ಎನ್ನುವವರ ಜಮೀನಿನ ಭಾವಿಯಲ್ಲಿ ಮೊಸಳೆ ಕಾಣಿಸಿಕೊಂಡಿತ್ತು. ಗ್ರಾಮಸ್ಥರ ದೂರಿನ ಅನ್ವಯ ಮೊಸಳೆ ಸೆರೆ ಹಿಡಿಯುವ ಪರಿಣಿತರ ಸಹಾಯದೊಂದಿಗೆ ಮೊಸಳೆಯನ್ನು ಹಿಡಿಯಲು ಕಾರ್ಯಾಚರಣೆಗೆ ಇಳಿದ ತಂಡ ಮೊಸಳೆಯನ್ನು ಜೀವಂತವಾಗಿ ಹಿಡಿದು ಆಲಮಟ್ಟಿ ಕೃಷ್ಣಾ ನದಿಯ ಹಿನ್ನೀರಿನಲ್ಲಿ ಬಿಟ್ಟಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಉಪ ವಲಯ ಅರಣ್ಯಾಧಿಕಾರಿ ರಮೇಶ ಮೆಟಗುಡ್ಡ, ಗಸ್ತು ಅರಣ್ಯಪಾಲಕ ಯಲ್ಲಪ್ಪ ಹಿರೇಕುರುಬರ, ಗುರಣ್ಣ ಮಾಡಗಿ, ಈಶ್ವರಯ್ಯ ಹಿರೇಮಠ, ಸೇರಿದಂತೆ ಮೊಸಳೆ ಕರ್ಯಚರಣೆಯ ಪರಿಣಿತ ನಾಗೇಶ ಮೋಪಗಾರ ತಂಡದವರು ಭಾಗಿಯಾಗಿದ್ದರು.

ಬಾಲ ಸಾಹಿತ್ಯ ಪುರಸ್ಕಾರಕ್ಕಾಗಿ ಕೃತಿಗಳ ಆಹ್ವಾನ

ಉದಯರಶ್ಮಿ ನ್ಯೂಸ್

ಸಿಂದಗಿ: ಸಿಂದಗಿಯ ವಿದ್ಯಾಚೇತನ ಪ್ರಕಾಶನದಿಂದ ಕೊಡಮಾಡುವ ಬಾಲಸಾಹಿತ್ಯ ಪುರಸ್ಕಾರಕ್ಕಾಗಿ 2023ರಲ್ಲಿ ಮೊದಲ ಮುದ್ರಣವಾಗಿ ಪ್ರಕಟಗೊಂಡ ಮಕ್ಕಳ ಸಾಹಿತ್ಯ ಕೃತಿಗಳನ್ನು ಆಹ್ವಾನಿಸಲಾಗಿದೆ.

ಈ ಪ್ರಶಸ್ತಿಗೆ ಆಸಕ್ತ ಲೇಖಕರು ಮಕ್ಕಳ ಸಾಹಿತ್ಯದ ಕಥೆ, ಕವನ, ಕಾದಂಬರಿ ಈ ಮೂರು ಪ್ರಕಾರಗಳ ಕೃತಿಗಳನ್ನು ಕಳಿಸಬಹುದು.2023ರಲ್ಲಿ ಪ್ರಕಟಗೊಂಡ ಕೃತಿಯ ನಾಲ್ಕು ಪ್ರತಿಗಳನ್ನು ರಜಿಸ್ಟರ್ಡ ಅಂಚೆ ಅಥವಾ ಕೋರಿಯರ್ ಮೂಲಕ ಕಳುಹಿಸಬೇಕು. ಈ ಕೃತಿಗಳನ್ನು ಹಿಂತಿ–ರುಗಿಸಲಾಗುವುದಿಲ್ಲ. ಕೃತಿಗಳನ್ನು ಮಾರ್ಚ 31ರೊಳಗಾಗಿ ತಲುಪುವಂತೆ ಹ.ಮ. ಪೂಜಾರ, ನಿವೃತ್ತ ಶಿಕ್ಷಕರು, ಶ್ರೀ ಸಂಗಮೇಶ್ವರ ಕಾಲನಿ, ಸಿಂದಗಿ–586 128, ಜಿಲ್ಲಾ ವಿಜಯಪುರ ಈ ವಿಳಾಸಕ್ಕೆ ಕಳುಹಿಸಬೇಕು. ಪ್ರಶಸ್ತಿಯು ಮೂರು ಪ್ರಕಾರಗಳಿಗೆ ತಲಾ ಐದು ಸಾವಿರ ನಗದು ಬಹುಮಾನ, ಪ್ರಶಸ್ತಿ ಫಲಕ ಹಾಗೂ ಸನ್ಮಾನ ಒಳಗೊಂಡಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಹ.ಮ.ಪೂಜಾರ ಮೊಬೈಲ್ ನಂ.:9448644228ಗೆ ಸಂಪರ್ಕಿಸಬೇಕು ಎಂದು ವಿದ್ಯಾಚೇತನ ಪ್ರಕಾಶನದ ಪ್ರಕಟಣೆ ತಿಳಿಸಿದೆ.

ಸಚಿವ ಎಂ.ಬಿ.ಪಾಟೀಲ ಜಿಲ್ಲಾ ಪ್ರವಾಸ ವಿವರ

ಉದಯರಶ್ಮಿ ನ್ಯೂಸ್

ವಿಜಯಪುರ: ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಖಾತೆಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಂ.ಬಿ ಪಾಟೀಲ ಅವರು ಫೆ.24 ರಿಂದ ಫೆ.25ರವರೆಗೆ ವಿಜಯಪುರ ಜಿಲ್ಲಾ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಫೆ.24ರಂದು ಬೆಳಗ್ಗೆ 11.30 ಗಂಟೆಗೆ ಜಿಲ್ಲೆಯ ಇಂಡಿ ತಾಲೂಕು ಕ್ರೀಡಾಂಗಣದ ಹತ್ತಿರ ನಡೆಯುವ ಜಿಲ್ಲಾ ಗಾಣಿಗ ಸಮಾವೇಶದಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 1.30 ಗಂಟೆಗೆ ಇಂಡಿಯಿಂದ ಹೊರಟು, ವಿಜಯಪುರಕ್ಕೆ ಆಗಮಿಸುವರು. ಮಧ್ಯಾಹ್ನ 4 ಗಂಟೆಗೆ ಸಚಿವರ ನಿವಾಸದಲ್ಲಿ ಸಾರ್ವಜನಿಕರ ಕುಂದುಕೊರತೆ ಆಲಿಸುವರು. ಅಂದು ವಿಜಯಪುರದಲ್ಲಿ ವಾಸ್ತವ್ಯ ಮಾಡುವರು.

ಫೆ.25ರಂದು ಬೆಳಗೆ 11.15ಕ್ಕೆ ಜಿಲ್ಲೆಯ ಕಾತ್ರಾಳದಲ್ಲಿ ಭಕ್ತ ಕನಕದಾಸ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನೂತನ ಪುತ್ಥಳಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 2 ಗಂಟೆಗೆ ಕಾತ್ರಾಳದಿಂದ ನರಗುಂದಕ್ಕೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಫೆ.24ರಂದು ಶಾಸಕರಿಗೆ ಸನ್ಮಾನ

ಉದಯರಶ್ಮಿ ನ್ಯೂಸ್

ಸಿಂದಗಿ: ಶ್ರೀ ಸಮರ್ಥ ವಿದ್ಯಾವಿಕಾಸ ವಿವಿದ್ದೋದೇಶ ಸಂಸ್ಥೆಯ ಆಲಮೇಲ ರಸ್ತೆಯ ಹೊರವಲಯದಲ್ಲಿರುವ ಪ್ರೇರಣಾ ಪಬ್ಲಿಕ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಫೆ.24ರಂದು ಶಾಸಕರ ಸನ್ಮಾನ ಹಾಗೂ ಎಸ್–ಎಸ್ಎಲ್‌ಸಿ ವಿದ್ಯಾರ್ಥಿಗಳ ಶುಭಕೋರುವ ಸಮಾರಂಭವನ್ನು ರಾಂಪೂರ ರಸ್ತೆಯ ಶಾಲಾ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಆರ್.ಡಿ.ಕುಲಕರ್ಣಿ ತಿಳಿಸಿದ್ದಾರೆ.

ಕಾರ್ಯಕ್ರಮದ ಉದ್ಘಾಟಕರಾಗಿ ಶಾಸಕ ಅಶೋಕ ಮನಗೂಳಿ ಆಗಮಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಆರೀಫ್ ಬಿರಾದಾರ, ದಸಂಸ ಜಿಲ್ಲಾ ಸಂಚಾಲಕ ವಾಯ್.ಸಿ.ಮಯೂರ, ವಿ.ಡಿ.ಕುಲಕರ್ಣಿ, ಪಿ.ಡಿ.ಕುಲಕರ್ಣಿ, ಮುಖ್ಯೋಪಾಧ್ಯಾಯ ಎಸ್.ಆಯ್.ಅಸ್ಕಿ, ಪಿ.ಎಂ ಬುಕ್ಕಾ ಇರಲಿದ್ದಾರೆ. ಈ ವೇಳೆ ಚಿಕ್ಕ ಮಕ್ಕಳ ತಜ್ಞ ಡಾ.ಇಸ್ಮಾಯಿಲ್ ಮೊಗಲಾಯಿ, ಇಸಿಒ ಸುಧೀರ ಕಮತಗಿ, ಆನಂದ ಮಾಡಗಿ ಸಿಆರ್‌ಪಿ ನೀಲಕಂಠ ತಿಳಗೂಳ ಅವರನ್ನು ಸನ್ಮಾನಿಸಲಾಗುವುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದಯ ರಶ್ಮಿ
ಪ್ರತಿ ಮನೆ-ಮನದ ಸಂಗಾತಿ

ಫೆ.27ರಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

ಉದಯರಶ್ಮಿ ನ್ಯೂಸ್

ವಿಜಯಪುರ: ಕೆಪಿಟಿಸಿ–ಎಲ್ ವತಿಯಿಂದ 110ಕೆವಿ ಬೇಗಳ ನಾಲ್ಕನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು, 110/11ಕೆವಿ ವಿವಿ ಕೇಂದ್ರ ಕೆಐಎಡಿಬಿ, ಜುಮನಾಳ, ಸಿಟಿ ವಿಜಯಪುರ 220/110 ಕೆವಿ ಸ್ವೀಕರಣಾ ಕೇಂದ್ರ ವಿಜಯಪುರದಿಂದ ಹೊರಹೋಗುವ ಎಲ್ಲಾ 11 ಕೆವಿ ವಿದ್ಯುತ್ ಮಾರ್ಗಗಳಿಗೆ ಫೆ.27ರ ಬೆಳಗ್ಗೆ 9ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತಯವಾಗಲಿದೆ. ಗ್ರಾಹಕರು ಸಹ–ರಿಸಬೇಕು ಎಂದು ವಿಜಯಪುರ ಹೆಸ್ಕಾಂನ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದಯರಶ್ಮಿ ದಿನಪತ್ರಿಕೆ

ಕಾವ್ಯರಶ್ಮಿ

– ರಾಜು ಗಾರೆಮನೆ

("ನಮ್ಮ ಕಥಾ ಅರಮನೆ" ಬರಹಗಾರರು)

ಪ್ರೇಮ

ಮನದ ವಿರಹಕೆ ಹರಿಯುವ ಪ್ರೇಮ ನದಿಯಾದೆ,
ಹೃದಯ ಬಾಂಧವ್ಯದ ಮಿಡಿತಕೆ ಸ್ವರಜತಿಯಾದೆ
ಕನಸು ನನಸುಗಳ ನೆನಪಿಗೆ ಮೆಲುಕಿನ ಚಾವಡಿ ,
ಮನಸ ಮಮಕಾರಕ್ಕಾದೆ ಪಿಸುಮಾತಿನ ನಾಣ್ಣುಡಿ.

ತೊರೆದು ಜೀವಿಸದ ಅನುರಾಗಕೆ ನಕಾರದ ಆಕ್ಷೇಪ
ತೊರೆ ನೆರೆಯ ಬಾಳ ಸಂಗಮಕೆ ಸ್ವೀಕಾರದ ನಿಕ್ಷೇಪ
ನಿನ್ನಿಂದಲೇ ಆಗಮನ ಚೈತ್ರದ ಮುಂಚಿನ ಫಾಲ್ಗುಣ
ಹಿತದ ಬಾಳಿನ ನಡಿಗೆಗೆ ವರವಾಯ್ತು ನಿನ್ನ ಕಾಲ್ಗುಣ

ಮಧುಚಂದ್ರ

ಮಧುಮಿತಾ "ಅರಳು ಮಲ್ಲಿಗೆ" ಎಂಬ ಪ್ರೊಫೈಲ್‌ನಲ್ಲಿ ಒಂದುಅರಳುತ್ತಿರುವ ಮಲ್ಲಿಗೆಯ ಫೋಟೋ ಹಾಕಿಕೊಂಡು ಆನ್‌ಲೈನ್‌ನ ಸಾಹಿತ್ಯದ ಗುಂಪುಗಳಲ್ಲಿ ಕಥೆ ಕವನಗಳನ್ನು ಬರೆಯುತ್ತಿದ್ದಳು. "ಕವಿ ಮಿತ್ರ" ಎನ್ನುವವರು ಇವಳ ಬರಹಗಳ ಅಭಿಮಾನಿಯಾಗಿದ್ದರು. ಇವಳ ಪ್ರತಿ ಬರಹವನ್ನೂ ಓದಿ, ವಿಮರ್ಶಿಸಿ, ಮೆಚ್ಚುಗೆ ಸೂಚಿಸುತ್ತಿದ್ದ. ಬರಬರುತ್ತಾ ಇಬ್ಬರೂ ಗೆಳೆಯರಾಗಿ ಮೆಸೆಂಜರ್‌ನಲ್ಲಿ ಚಾಟ್ ಮಾಡುತ್ತಾ ಹತ್ತಿರವಾದರು. ಯಾರಾದರೂ ಒಬ್ಬರು ಒಂದು ದಿನ ಕಾಣಿಸಿಕೊಳ್ಳದಿದ್ದರೆ, ಇನ್ನೊಬ್ಬ–ರಿಗೆ ಏನೋ ಕಳೆದುಕೊಂಡಂತೆ ಆಗುತ್ತಿತ್ತು.



ಪ್ರೇಮಿಗಳ ದಾರದ ವಿಶೇಷ

ಇಬ್ಬರಿಗೂ ಒಬ್ಬರನ್ನೊಬ್ಬರು ನೋಡದೇ ಇರಲು ಸಾಧ್ಯವೇ ಇಲ್ಲ ಎಂಬಂತಾದರು. ಕೊನೆಗೆ ಇಬ್ಬರೂ ಭೇಟಿಗೆ ಒಂದು ದಿನ ನಿಗದಿ ಮಾಡಿ ಭೇಟಿಯಾಗುವುದೆಂದು ನಿರ್ಧರಿಸಿ ಮಧುಮಿತಾ ವಾಸವಿದ್ದ ಮೈಸೂರಿನ್ನಲ್ಲೇ ನಿಗದಿ ಮಾಡಲಾಯಿತು. ಮಧುಮಿತಾ ಅವನನ್ನು ಭೇಟಿಯಾಗುವ ಕಾತರದಲ್ಲಿ ನಿದ್ರೆಯಿರದ ರಾತ್ರಿಯನ್ನು ಕಳೆದು, ಮನೆಯಲ್ಲಿ ಏನೋ ಸುಳ್ಳು ಹೇಳಿ, ಸಡಗರದಿಂದ ನಿಗದಿಪಡಿಸಲಾಗಿದ್ದ ಜಾಗಕ್ಕೆ ಬಂದಳು. ಕ್ಷಣಕ್ಷಣಕ್ಕೂ ಗಡಿಯಾರವನ್ನು ನೋಡುತ್ತಿದ್ದಳು. ಊಹೂಂ! ಅವನು ಹೇಳಿದ್ದ ಹತ್ತು ಗಂಟೆ ದಾಟಿದರೂ ಬರಲಿಲ್ಲ. ಮೆಸೆಂಜರ್‌ನಲ್ಲಿ "ಯಾಕೆ ಇನ್ನೂ ಬರಲಿಲ್ಲ" ಎಂದು ಮೆಸೇಜ್ ಮಾಡಿದರೂ, ತೆರೆದು ನೋಡುತ್ತಿಲ್ಲ. ಹನ್ನೊಂದಾಯಿತು, ಹನ್ನೆರಡಾಯಿತು... ಅವಳ ಆಸೆಯ ಬಲೂನ್‌ನ ಗಾಳಿ ನಿಧಾನವಾಗಿ ಇಳಿಯತೊಡಗಿತು. ಮೆಸೆಂಜರ್ ಕಾಲ್ ಮಾಡಿದರೂ ತೆಗೆಯಲಿಲ್ಲ, ನಿರಾಶಳಾಗಿ ಮನೆಗೆ ಬಂದಳು.

ಮರುದಿನವೂ ಅವನಿಂದ ಏನೂ ಪ್ರತಿಕ್ರಿಯೆ ಬಾರದಿದ್ದಾಗ, ಎಲ್ಲರೂ ಹೇಳುವಂತೆ, ಕವಿ ಮಿತ್ರ ಎನ್ನುವುದೂ ಒಂದು ಫೇಕ್ ಅಕೌಂಟ್. ಸುಮ್ಮನೇ ನನ್ನ ಜೊತೆ ಟೈಂಪಾಸ್‌ಗೆ ಫ್ಲರ್ಟ್ ಮಾಡಿದ್ದಾನೆ, ಸಧ್ಯ ಹೆಚ್ಚಿನ ಅನಾಹುತವಾಗದೇ ಇಷ್ಟಕ್ಕೇ ಕಳೆಯಿತಲ್ಲ ಎಂದುಕೊಂಡು ಕೋಪದಿಂದ ತನ್ನ ಪ್ರೊಫೈಲ್‌ನ್ನು ಡಿಲೀಟ್ ಮಾಡಿಬಿಟ್ಟಳು. ಅವಳ ಬರವಣಿಗೆಯ ಉತ್ಸಾಹವನ್ನೂ ಕಳೆದುಕೊಂಡಳು. ಕಣ್ಣೀರು ಹರಿಸಿ ತನ್ನ ದುಃಖವನ್ನೆಲ್ಲಾ ಕಳೆದುಕೊಂಡಳು. ಆದರೂ, ಒಮ್ಮೊಮ್ಮೆ ನೆನಪಾಗಿ ಬೇಸರವಾಗುತ್ತಿತ್ತು.

ಇದಾದ ಒಂದೆರಡು ತಿಂಗಳಲ್ಲಿ ತಂದೆ ತೋರಿಸಿದ ಹುಡುಗ ಚಂದ್ರ ಮೋಹನ್‌ನನ್ನು ಮದುವೆಯಾಗಿ ಬೆಂಗಳೂರು ಸೇರುತ್ತಾಳೆ. ಇಬ್ಬರೂ ಸಂಸಾರ ಹೂಡಿದರೂ, ಇಬ್ಬರ ನಡುವೆ ಏನೋ ಕೊರತೆ, ಇಬ್ಬರೂ ಮನ ಬಿಚ್ಚಿ ಮಾತನಾಡಿದ್ದೇ ಇಲ್ಲ, ಯಾಂತ್ರಿಕವಾಗಿ ಜೀವನ ಸಾಗುತ್ತಿತ್ತು. ಚಂದ್ರ ಮೋಹನ್ ಪ್ರೀತಿಯಿಂದ ಹತ್ತಿರ ಬಂದರೂ, ಮಧುಮಿತಾ ನಯವಾಗಿ ದೂರವಾಗುತ್ತಿದ್ದಳು.

ಇವಳ ನಿರುತ್ಸಾಹ ಕಂಡು ಚಂದ್ರುಗೆ, ಇವಳು ಯಾರನ್ನೋ ಪ್ರೀತಿಸುತ್ತಿದ್ದಳೇನೋ, ತಂದೆಯ ಬಲವಂತಕ್ಕೆ ನನ್ನನ್ನು ಮದುವೆಯಾಗಿರಬೇಕು ಎಂಬ ಅನುಮಾನ ಕಾಡತೊಡಗುತ್ತದೆ. ಆದರೆ, ಅದನ್ನು ತಿಳಿಯುವ ಬಗೆ ಹೇಗೆ? ಕೊನೆಗೆ ತಡೆಯಲಾರದೇ ಮಧುಮಿತಾಳನ್ನೇ ಕೇಳಿಬಿಡುತ್ತಾನೆ, "ನೀನು ಯಾರನ್ನಾದರೂ ಪ್ರೀತಿಸುತ್ತಿದ್ದೆಯ?" ಎಂದು.

ಮಧು, "ಆ ರೀತಿ ಏನೂ ಇಲ್ಲ, ಯಾಕೆ ಹಾಗೆ ಕೇಳುತ್ತಿದ್ದೀರ?" ಎಂದಳು. ಚಂದ್ರು, "ಹೊಸದಾಗಿ ಮದುವೆಯಾದವರಲ್ಲಿ ಇರುವ ಉತ್ಸಾಹವೇ ನಿನ್ನಲ್ಲಿಲ್ಲ, ಅದಕ್ಕೇ ಹಾಗೆನ್ನಿಸಿತು, ಹಾಗೇನಾದರೂ ಇದ್ದರೆ ಹೇಳು, ನಾನೇ ಮುಂದೆ ನಿಂತು, ಅವನನ್ನು ಹುಡುಕಿ, ನಿನ್ನನ್ನು ಅವನ ಜೊತೆ ಸೇ–ರಿಸುತ್ತೇನೆ" ಎನ್ನುತ್ತಾನೆ.

ಮಧು, "ಹಾಗೇನಿಲ್ಲ, ಮೊದಲ ಬಾರಿ ತಂದೆ ತಾಯಿಯನ್ನು ಬಿಟ್ಟು ಬಂದಿರುವುದರಿಂದ ಮನಸ್ಸಿಗೆ ಸ್ವಲ್ಪ ಬೇಸರವಾಗುತ್ತಿದೆ, ಸ್ವಲ್ಪ ದಿನ ಕಳೆದರೆ ಸರಿ ಹೋಗುತ್ತದೆ" ಎಂದು ಸಮಾಧಾನ ಮಾಡುತ್ತಾಳೆ.

ಆದರೂ, ಚಂದ್ರುನ ತಲೆಯೊಳಗೆ ಹೊಕ್ಕ ಅನುಮಾನದ ಹುಳು ದೂರವಾಗುವುದೆ ಕೊರೆಯುತ್ತಲೇ ಇರುತ್ತದೆ. "ಇವಳು ನೇರವಾಗಿ ಕೇಳಿದರೆ ಹೇಳುವುದಿಲ್ಲ, ನಾನೇ ಹೇಗಾದರೂ ಕಂಡುಹಿಡಿಯಬೇಕು" ಎಂದುಕೊಳ್ಳುತ್ತಾನೆ.

ಒಂದು ಭಾನುವಾರ, ಮಧು ತನ್ನ ಫೋನನ್ನು ಲಾಕ್ ಮಾಡುವುದನ್ನು ಮರೆತು, ಅನ್‌ಲಾಕ್ ಸ್ಥಿತಿಯಲ್ಲಿ ಟೇಬಲ್ ಮೇಲಿಟ್ಟು, ಸ್ನಾನಕ್ಕೆ ಹೋಗಿದ್ದಳು. ಅಲ್ಲೇ ಇದ್ದ ಶರತ್ ಕುತೂಹಲದಿಂದ ಅವಳ ಫೋನನ್ನು ತೆರೆದು ನೋಡುತ್ತಾನೆ. ಅದರಲ್ಲಿ ಅನುಮಾನ ಪಡುವಂತಹ ಯಾವ ಫೋನ್ ಕಾಲ್‌ಗಳಾಗಲೀ, ಕಾಂಟ್ಯಾಕ್ಟ್ ನಂಬರ್ ಆಗಲೀ ಇರುವುದಿಲ್ಲ. "ಕೀಪ್ ಮೈ ನೋಟ್ಸ್" ಆಪ್ ಕಾಣಿಸುತ್ತದೆ., ಕುತೂಹಲದಿಂದ ಅದನ್ನು ತೆರೆದು ನೋಡುತ್ತಾನೆ. ಅದರಲ್ಲಿ ಕಥೆ, ಕವನಗಳನ್ನು ಟೈಪ್ ಮಾಡಿರುವುದು ಕಾಣಿಸುತ್ತದೆ. ಹಾಗೇ ಓದಿನಲ್ಲಿ ಮುಳುಗಿ ಹೋಗುತ್ತಾನೆ.

ಸ್ನಾನ ಮುಗಿಸಿ ಬಂದ ಮಧು ಗಂಡನ ಕೈಯಲ್ಲಿ ತನ್ನ ಫೋನ್ ನೋಡಿ,"ನನ್ನ ಫೋನ್‌ನಲ್ಲಿ ಏನನ್ನು ಹುಡುಕುತ್ತಿದ್ದೀರಿ? ಇನ್ನೊಬ್ಬರ ಫೋನ್‌ನಲ್ಲಿ ಇಣುಕಿ ನೋಡುವುದು ಮರ್ಯಾದಸ್ಥರ ಲಕ್ಷಣ ಅಲ್ಲ" ಎಂದು ಛೇಡಿಸುತ್ತಾಳೆ.

ಚಂದ್ರು, "ನಾನು ಇನ್ನೊಬ್ಬರ ಫೋನ್‌ನಲ್ಲಿ ಇಣುಕಿ ನೋಡುತ್ತಿಲ್ಲ, ನನ್ನ ಹೆಂಡತಿಯ ಫೋನ್‌ನಲ್ಲಿ ನೋಡುತ್ತಿದ್ದೇನೆ" ಎಂದು ಹುಸಿ ನಗುತ್ತಾನೆ. ಮುಂದುವರೆದು "ಅರಳು ಮಲ್ಲಿಗೆ ನೀನೇನ? ಮತ್ತೆ ಈಗ ಯಕೆ ಬರೆಯುತ್ತಿಲ್ಲ?" ಎಂದು ಪ್ರಶ್ನಿಸುತ್ತಾನೆ.

ಮಧು, "ಹೌದು ಅರಳು ಮಲ್ಲಿಗೆ ಎನ್ನುವ ಪ್ರೊಫೈಲ್‌ನಲ್ಲಿ ಬರೆಯುತ್ತಿದ್ದೆ. ಈಗ ಪ್ರೊಫೈಲ್ ಡಿಲೀಟ್ ಮಾಡಿಬಿಟ್ಟಿದ್ದೀನಿ, ಹೊಸದಾಗಿ ಏನೂ ಬರೆಯುತ್ತಿಲ್ಲ. ನೀವು ನನ್ನ ಬರ

ಶಾಸಕ ಕಾಶಪ್ಪನವರ ರಿಗೆ ಸನ್ಮಾನ

ಉದಯರಶ್ಮಿ ನ್ಯೂಸ್

ಬಸವನ ಬಾಗೇವಾಡಿ: ಬೆಂಗಳೂರಿನಲ್ಲಿ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಹುನುಗುಂದ ಮತಕ್ಷೇತ್ರದ ಶಾಸಕ ವಿಜಯಾನಂದ ಕಾಶಪ್ಪನವರ ಅವರಿಗೆ ರಾಷ್ಟ್ರೀಯ ಬಸವಸೈನ್ಯದ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಬಿರಾದಾರ ಅವರು ಗುರುವಾರ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಮಹೇಶ ಮುಳವಾಡ,ಸುಭಾಷ ಕೊಪ್ಪದ, ಜಟ್ಟಿಂಗರಾಯ ಮಾಲಗಾರ, ಹಣಮಂತ ಅಡಗಿಮನಿ ಇದ್ದರು.

ಕಣಕಾಲ ಪಿಕೆಪಿಎಸ್: ಅವ್ಯವಹಾರ ತನಿಖೆಗೆ ಆಗ್ರಹ

ಉದಯರಶ್ಮಿ ನ್ಯೂಸ್

ಬಸವನಬಾಗೇವಾಡಿ: ತಾಲೂಕಿನ ಕಣಕಾಲ ಗ್ರಾಮದ ವಿವಿದ್ದೋದೇಶಗಳ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದಲ್ಲಿ ನಡೆದಿರುವ ಸಹಕಾರ ಕಾನೂನುಗಳ ಉಲ್ಲಂಘನೆ, ಹಣ ದುರ್ಬಳಕೆ ಸೇರಿದಂತೆ ಅಲ್ಲಿನ ನಡೆದಿರುವ ಅವ್ಯವಹಾರ ಕುರಿತು ಸಮಗ್ರ ತನಿಖೆಯಾಗಬೇಕು. ಈ ಕುರಿತು ವಿಚಾರಣೆ ಮಾಡಿದ ತನಿಖಾಧಿಕಾರಿಗಳು ತನಿಖೆ ಮಾಡಿ ತಪ್ಪಿತಸ್ಥರನ್ನು ಸೇವೆಯನ್ನು ವಜಾಗೊಳಿಸದೇ ವಿಳಂಬ ನೀತಿ ಅನುಸರಿಸುತ್ತಿದ್ದಾರೆ. ಕೂಡಲೇ ಸಂಬಂಧಿಸಿದ ಸಹಕಾರ ಇಲಾಖೆಯ ಅಧಿಕಾರಿಗಳು ತನಿಖಾ ಅಧಿಕಾರಿ ಸೇರಿದಂತೆ ವಿಪಿಕೆಪಿಎಸ್ ಮುಖ್ಯಕಾರ್ಯನಿರ್ವಾಹಣಾಧಿಕಾರಿ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆಯ ಸ್ವಾಭಿಮಾನಿ ಬಣದ ಜಿಲ್ಲಾ ಉಸ್ತುವಾರಿ ರಾಜಶೇಖರ ಹುಲ್ಲೂರ, ಜಿಲ್ಲಾ ಯುವ ಘಟಕದ ಅಧ್ಯಕ್ಷ ಮಹಾಂತೇಶ ಚಕ್ರವರ್ತಿ ಆಗ್ರಹಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಹಕಾರಿಯಲ್ಲಿ ನಡೆದಿರುವ ಅವ್ಯವಹಾರ, ಸಹಕಾರ ಕಾನೂನುಗಳ ಉಲ್ಲಂಘನೆ, ಖರ್ಚು ವೆಚ್ಚಗಳ ಮಾಹಿತಿ ನೀಡದೇ ಇರುವದು, ಹಣ ದುರ್ಬಳಕೆ, ಸಾಲಗಾರರಿಗೆ, ಠೇವಣಿದಾರರಿಗೆ ಸಮರ್ಪಕ ಮಾಹಿತಿ ನೀಡದೇ ಇರುವದರ ಬಗ್ಗೆ ಸಹಕಾರ ಇಲಾಖೆಗೆ ದೂರು ನೀಡಿದಾಗ ಸಹಕಾರಿ ಅಭಿವೃದ್ಧಿ ಅಧಿಕಾರಿಗಳನ್ನು ವಿಚಾರಣೆಗೆ ಕಳುಹಿಸಲಾಗಿತ್ತು. ಅವರು ಮುಖ್ಯಕಾರ್ಯನಿರ್ವಾಹಣಾಧಿಕಾರಿಯ ರಕ್ಷಣಾತ್ಮಕವಾಗಿ ನೀಡಿದ ಸಮಜಾಯಿಸಿಗಳನ್ನು ಒಪ್ಪಿಕೊಂಡಿದ್ದಾರೆ. ಅವರಿಗೆ ಅನ್ವೇಷಕ ಬುದ್ಧಿಯಿಂದ ದೋಷಗಳನ್ನು ಗುರುತಿಸದೇ ಸರಿಪಡಿಸಲು ಸಾಕಷ್ಟು ಸಮಯ ನೀಡಿದ್ದಾರೆ. ಇದು ಸರಿಯಲ್ಲ. ಕೂಡಲೇ ಮೇಲಾಧಿಕಾರಿಗಳು ಇದರ ಬಗ್ಗೆ ಗಮನ ಹರಿಸಿ ಸೂಕ್ತ ತನಿಖೆ ಮಾಡಬೇಕೆಂದರು.

ಮುಖ್ಯಕಾರ್ಯನಿರ್ವಾಹಣಾಧಿಕಾರಿ ಅವರು ಅಧಿಕಾರ ವಹಿಸಿಕೊಂಡ ನಂತರ ಲೆಕ್ಕಪರಿಶೋಧನಾ ವರದಿ ಯಾವ ಸದಸ್ಯರಿಗೂ ನೀಡಿಲ್ಲ . ಇದುವರೆಗೂ ರೈತರಿಗೆ ಕಳೆದ 9 ವರ್ಷದಿಂದ ಲಾಭಾಂಶ ನೀಡಿಲ್ಲ. ಕೋರಂ ಭರ್ತಿ ಇರದೇ ಇದ್ದರೂ ಸಭೆ ಮಾಡಲಾಗಿದೆ. ಮಾಹಿತಿ ಹಕ್ಕು ಅಧಿನಿಯಮದಡಿ ಮಾಹಿತಿ ಕೇಳಿದರೂ ಯಾವ ಮಾಹಿತಿ ನೀಡಲು ಬರುವುದಿಲ್ಲ ಎಂದು ಪತ್ರ ನೀಡಿದ್ದಾರೆ. ಪ್ರತಿ ರೈತರಿಂದ ಸ್ವಾದಿಲಾರಕ್ಕೆಂದು ರೂ.250 ತೆಗೆದುಕೊಳ್ಳುತ್ತಾರೆ. ರೂ..500 ಅನ್ನು ತೆಗೆದುಕೊಂಡರೂ ಅದಕ್ಕೆ ರಸೀದಿ ಸಂಖ್ಯೆ ಇಲ್ಲ. ಇವರು ಮಾಡಿರುವ ಅವ್ಯವಹಾರದ ಪ್ರತಿಯೊಂದು ದಾಖಲೆಗಳು ನಮ್ಮ ಬಳಿ ಇವೆ. ಇವರು ಬಿಜೆಪಿ ಪಕ್ಷದ ಕಾರ್ಯಕ್ರಮದಲ್ಲಿ ಸಹ ಭಾಗಿಯಾಗುವ ಮೂಲಕ ಸಕ್ರಿಯ ರಾಜಕಾರಣಿಯಾಗಿದ್ದಾರೆ. ಇದಕ್ಕೆ ಪುಷ್ಟಿಕರಿಸುವ ಅಗತ್ಯ ದಾಖಲೆಗಳಿವೆ. ಎಂದರು.

ಸಂಘದಲ್ಲಿ ಕುರಿಸಾಲ, ಟ್ರ್ಯಾಕ್ಟರ್ ಸಾಲ, ಪಶು ಸಾಲ, ದ್ರಾಕ್ಷಿ ಸಾಲ ಸಂಘದಿಂದ ಕೊಡುವ ಯೋಜನೆಗಳು ಯಾವ ರೈತರು ಫಲಾನುಭವಿಗಳಾಗಿದ್ದಾರೆ. ಎಷ್ಟು ಸಂಘದಿಂದ ಅವರಿಗೆ ನೀಡಿದ್ದಾರೆ ಎಂದ ತನಿಖೆಯಾಗಬೇಕಿದೆ. ಈ ಸಹಕಾರಿಯಲ್ಲಿ ಸಾಕಷ್ಟು ಅವ್ಯವಹಾರವಾಗಿದೆ. ಈ ಕುರಿತು ಸಹಕಾರ ಇಲಾಖೆಯ ಮೇಲಾಧಿಕಾರಿಗಳು, ನಮ್ಮ ಭಾಗದ ಶಾಸಕರು ಸೇರಿದಂತೆ ಸಂಬಂಧಿಸಿದ ಎಲ್ಲ ಅಧಿಕಾರಿಗಳು ಗಮನ ಹರಿಸಿ ಕೂಡಲೇ ತನಿಖೆ ಮಾಡಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯನ್ನು ವಜಾ ಗೊಳಿಸಬೇಕು. ಇದೇ ರೀತಿಯಲ್ಲಿ ಜಿಲ್ಲೆಯಲ್ಲಿರುವ ಎಲ್ಲ ಪಿಕೆಪಿಎಸ್ ಬ್ಯಾಂಕುಗಳಲ್ಲಿ ನಡೆದಿರುವ ವ್ಯವಹಾರದ ಕುರಿತು ಡಿಸಿಸಿ ಬ್ಯಾಂಕಿನ ಅಧಿಕಾರಿಗಳು ಗಮನ ಹರಿಸಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ರಾಜುಗೌಡ ಬಿರಾದಾರ, ತಾಲೂಕಾಧ್ಯಕ್ಷ ಸುನೀಲ ರಾಠೋಡ, ಸಾಬಣ್ಣ ಇಟಗಿ, ಹಣಮಂತ ದಿನ್ನಿ, ಪವನಕುಮಾರ ಹುಣಶ್ಯಾಳ, ಶಿವರಾಜ ಹಚ್ಯಾಳ, ಮಲ್ಲಿಕಾರ್ಜುನ ಕೋಟಿ ಇತರರು ಇದ್ದರು.

ನಿರಂತರ ಪ್ರಯತ್ನ, ಅಧ್ಯಯನದಿಂದ ಯಶಸ್ಸು ಸಾಧ್ಯ

ಉದಯರಶ್ಮಿ ನ್ಯೂಸ್

ವಿಜಯಪುರ: ನಗರದ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಐ.ಕ್ಯೂ.ಎ.ಸಿ ಹಾಗೂ ಪ್ಲೇಸಮೆಂಟ್ ಘಟಕಗಳ ಆಶ್ರಯದಲ್ಲಿ ' ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆ – ಒಂದು ದಿನದ ಕಾರ್ಯಗಾರ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಡಾ. ಆರ್. ಎಸ್ ಕಲ್ಲೂರ್ಮಠ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸತತ ಪರಿಶ್ರಮ, ನಿರಂತರ ಪ್ರಯತ್ನ ಮತ್ತು ತಾಳ್ಮೆಯಿಂದ ಅಧ್ಯಯನ ಮಾಡಿದರೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಗಳಿಸಲು ಸಾಧ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆ ಪುಸ್ತಕಗಳನ್ನು ಬಿಡುಗಡೆಗೊಳಿಸಿ ವಿದ್ಯಾರ್ಥಿಗಳಿಗೆ ಪರಿಚಯಿಸಲಾಯಿತು.

ಕಾರ್ಯಕ್ರಮದ ಮೊದಲು ಗೋಷ್ಠಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಪ್ರೊ ಪಿ. ಬಿ.ಬಿರಾದಾರ ವಿವಿದಾಸ್ ಸ್ಪರ್ಧಾತ್ಮಕ ಪರೀಕ್ಷೆಗಳಾದ ಐಎಎಸ್, ಕೆಎಎಸ್, ಎಫ್ ಡಿ ಎ, ಎಸ್ ಡಿ ಎ, ಪಿಡಿಒ, ಪಿಎಸ್ಐ,ಪಿ ಸಿ,ಮುಂತಾದ ಪರೀಕ್ಷೆಗಳಿಗೆ ತಯಾರು ಮಾಡಲು ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಮಾರ್ಗದರ್ಶನ ಮಾಡಿದರು.

ಎರಡನೆಯ ಗೋಷ್ಠಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಡಾ. ಚಿದಾನಂದ ಎಸ್. ಆನೂರ, ವಿವಿಧ ಬ್ಯಾಂಕಿಂಗ್ ಆರ್ ಆರ್ ಬಿ ಪರೀಕ್ಷೆಗಳ ಬಗ್ಗೆ ಮಾರ್ಗದರ್ಶನ ನೀಡಿದರು.

ಕಾರ್ಯಕ್ರಮದಲ್ಲಿ ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕ ಫೋಟೋ ಪೂಜೆ ನೆರವೇರಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ. ರಾಜಶೇಖರ್ ಬೆನಕನಹಳ್ಳಿ,ಪ್ರೊ. ಎಂ ಆರ್ ಜೋಶಿ, ಪ್ರೊ ಬಿ ಎ ಹೊಸಟ್ಟಿ ಪ್ರೊ. ಆರ್ ಟಿ ಬಳ್ಳೊಳ್ಳಿ, ಡಾ. ದೌಲಸಾಬ್ ಪಿಂಜಾರ್,ಡಾ. ಎಂ ಆರ್ ಕೆಂಭಾವಿ, ಪ್ರೊ ಲಕ್ಷ್ಮಿ ಮೋರೆ, ಶಿವಾನಂದ ಸಂಗೊಲಿ ವೀರನಗೌಡ ಬಿರಾದಾರ್, ನವೀನ್ ಗೌಡ ಬಿರಾದಾರ್,ಸುಜಾತಾ ಬಿರಾದಾರ, ಪ್ರೊ ಮಂಜುನಾಥ ಗಾಣಿಗೇರ,ಪ್ರೊ. ರಾಜೇಶ್ವರಿ ಪುರಾಣಿಕ, ಪ್ರೊ ರಾಮಣ್ಣ ಕಳ್ಳಿ, ಪ್ರೊ ಬೋರಮ್ಮ ಗಂಜಿಹಾಳ, ಪ್ರೊ ನಾಥುರಾಮ್ ಪವಾರ, ಪ್ರೊ ಫೈರೋಜ್ ಪಠಾಣ, ಪ್ರೊ ಸದಾಶಿವ ಚಲವಾದಿ,ಡಾ. ಆನಂದ ಕುಲಕರ್ಣಿ, ಹಾಗೂ ಇತರರ ಬೋಧಕ –ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಪ್ರೊ ಲಕ್ಷ್ಮಿ ಮೋರೆ ಸ್ವಾಗತಿಸಿದರು. ಡಾ. ರಾಘವೇಂದ್ರ ಗುರುಜಾಲ ನಿರೋಪಿಸಿದರು. ಪ್ರೊ ರಾಮಪ್ಪ ಕೋಮಟಗಿ ವಂದಿಸಿದರು.

ಇಂದು ಆದರ್ಶ ಶಿಕ್ಷಕ ಪ್ರಶಸ್ತಿ ಪ್ರದಾನ

ಉದಯರಶ್ಮಿ ನ್ಯೂಸ್

ಸಿಂದಗಿ: ನಗರದ ಲಿಟಲ್ ವಿಂಗ್ಸ್ ಪ್ರಿ ಸ್ಕೂಲ್, ಶನಿವಾರ ಬೆಳಿಗ್ಗೆ 10.30 ಗಂಟೆಗೆ ಮಾಂಗಲ್ಯ ಭವನದಲ್ಲಿ ಲಿಟಲ್ ವಿಂಗ್ಸ್ ಫೆಸ್ಟಿವಲ್ ಹಾಗೂ ಆದರ್ಶ ಶಿಕ್ಷಕ ಪ್ರಶಸ್ತಿ ಸಮಾರಂಭ ಜರುಗುವುದು.

ಈ ಕಾರ್ಯಕ್ರಮದಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ಪವಿತ್ರಾಜಿ ಸಾನಿಧ್ಯ ವಹಿಸುವರು. ಶಾಸಕ ಅಶೋಕ ಮನಗೂಳಿ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಸಿಪಿಆಯ್ ನಾನಾಗೌಡ ಪೊಲೀಸ್ ಪಾಟೀಲ, ಪ್ರಥಮ ದರ್ಜೆ ಗುತ್ತಿಗೆದಾರ ಶ್ರೀಶೈಲಗೌಡ ಬಿರಾದಾರ, ಕನ್ನಡ ಸಾಹಿತ್ಯ ಪರಿಷತ್ತು ನಿಕಟ ಪೂರ್ವ ಅಧ್ಯಕ್ಷ ರಾಜಶೇಖರ ಕೂಚಬಾಳ, ಪ್ರಶಾಂತಗೌಡ ಪಾಟೀಲ, ಉಪನ್ಯಾಸಕ ಸಿದ್ದಲಿಂಗ ಕಿಣಿಗಿ, ಪಾಲಕ ಪ್ರತಿನಿಧಿ ಸುರೇಶ ಯರನಾಳ ಭಾಗವಹಿಸುವರು. ಶಹಾಪುರದ ಶಿಕ್ಷಕ ತಿಪ್ಪಣ್ಣ ಕ್ಯಾತನಾಳ, ಶರಣಗೌಡ ಬಿರಾದಾರ, ಪಂಚಾಕ್ಷರಿ ಸ್ಥಾವರಮಠ, ವೀರಭದ್ರ ಬಡಿಗೇರ, ಶ್ರೀಶೈಲ ಖೇಡಗಿ, ನಾಗಪ್ಪ ಯಲಗಟ್ಟಿ, ರಾಮನಗೌಡ ದರ್ಶನಾಪುರ, ಸಿಂದಗಿಯ ಎಚ್.ಕೆ ನಾಗಣಸುರ, ಕುದರತಲಿ ಭೂಸನೂರ, ಸಿದ್ದಪ್ಪ ಮಾರಿಯಾಳ, ಜೆ.ಬಿ.ಪಾಟೀಲ, ನಾಗರಾಜ ಪತ್ತಾರ, ಎಚ್.ಎನ್.ಚೌದರಿ, ಬಸವರಾಜ ಹಡಪದ, ಬಸವಂತರಾಯ ಹೂಗಾರ, ರಾಯಪ್ಪ ಇವಣಗಿ,ಮಲ್ಲಮ್ಮ ಅಡಕಿ, ವಿಜಯಪುರದ ಬಸವರಾಜ ಬೇನೂರ ಇವರಿಗೆ ಪ್ರಸಕ್ತ ಸಾಲಿನ ಮಂದಾರ ಸಿರಿ ಆದರ್ಶ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ರಾಷ್ಟ್ರ ಮಟ್ಟದ ಕ್ರೀಡಾಪಟು ಪ್ರಜ್ವಲ ತಳವಾರ, ರಾಜ್ಯ ಮಟ್ಟದ ಸಂಗೀತ ಪ್ರಶಸ್ತಿ ವಿಜೇತೆ ಕಾವ್ಯಾ ನಾಯ್ಕ, ನಿವೃತ್ತ ಶಿಕ್ಷಕ ಪ್ರಭುಲಿಂಗ ಲೋಣಿ, ಬಿ.ಸಿ.ಬಿರಾದಾರ, ಸಿದ್ದಣ್ಣ ಚೌಧರಿ, ಶಿವಶಂಕರ ಚೌಧರಿ, ಬಸವರಾಜ ಕಟಗಿಗಾಣ, ಲಕ್ಷ್ಮಿ ರೆಬಿನಾಳ, ವಿದ್ಯಾ ಬಡಿಗೇರ, ಬಸವರಾಜ ಗುರುಶೆಟ್ಟಿ, ಎಂ.ಬಿ.ಅಲ್ದಿ, ವಿಜಯಲಕ್ಷ್ಮಿ ಸಗರ, ಜ್ಞಾನೇಶ ಗುರವ ಅವರನ್ನು ಸನ್ಮಾನಿಸಿ ಗೌರವಿಸಲಾಗುವುದು ಎಂದು ಶಾಲೆಯ ಮುಖ್ಯೋಪಾಧ್ಯಾಯಿನಿ ಪೂಜಾ ಗಾಯಕವಾಡ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯಿರಿ :ಚವ್ಹಾಣ

ಉದಯರಶ್ಮಿ ನ್ಯೂಸ್

ವಿಜಯಪುರ: ವಿದ್ಯಾರ್ಥಿಗಳು ಮೊದಲು ಪರೀಕ್ಷಾ ಭಯದಿಂದ ಹೊರಬರಬೇಕು. ಆತ್ಮವಿಶ್ವಾಸವನ್ನು ಪಾಠ–ಪ್ರವಚನಗಳನ್ನು ಓದಿಕೊಂಡು ಮನನ ಮಾಡಿಕೊಳ್ಳಬೇಕು. ತರಗತಿಗಳಲ್ಲಿ ಶಿಕ್ಷಕರು ಕೇಳಿ ಕಲಿತ ಪಾಠ–ಪ್ರವಚನಗಳನ್ನು ಹಲವು ಸಲ ಓದಿ ಮತ್ತು ಬರೆದು ಪರೀಕ್ಷೆಯನ್ನು ಆತ್ಮ ವಿಶ್ವಾಸದಿಂದ ಬರೆಯಲು ಸಿದ್ಧರಾಗಬೇಕು ಎಂದು ಜಿಲ್ಲಾ ಬಂಜಾರಾ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಿ.ಎಲ್.ಚವ್ಹಾಣ್ ಹೇಳಿದರು.

ಜಿಲ್ಲಾ ಬಂಜಾರಾ ವಿದ್ಯಾವರ್ಧಕ ಸಂಘದ ಬಂಜಾರಾ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಪ್ರೌಢ ಶಾಲೆಗಳ ಎಸ್ಎಸ್ಎಲ್ಸಿ ವಿದ್ಯಾರ್ಥಿಗಳ ಶುಭಹಾರೈಕೆ ಸಮಾರಂಭದಲ್ಲಿ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು. ಆತ್ಮವಿಶ್ವಾಸ ಅನ್ನೋದು ಮನುಷ್ಯನಿಗೆ ತುಂಬಾನೇ ಮುಖ್ಯವಾಗುತ್ತದೆ. ನಮ್ಮಲ್ಲಿ ಎಷ್ಟೇ ಟ್ಯಾಲೇಂಟ್ ಇದ್ರೂ ಕೂಡ ನಾವು ಸಾಧನೆ ಮಾಡೋದಿಕ್ಕೆ ಸಾಧ್ಯವಿಲ್ಲ. ಇದರ ಜೊತೆಗೆ ಆತ್ಮ ವಿಶ್ವಾಸ ಇದ್ರೆ ಮಾತ್ರ ಜೀವನದಲ್ಲಿ ಮುಂದೆ ಸಾಗೋದಿಕ್ಕೆ ಸಾಧ್ಯ ಎಂದು ಹೇಳಿದರು.

ಮುಖ್ಯ ಅತಿಥಿ ಸ್ಥಾನವಹಿಸಿದ್ದ ಬಂಜಾರಾ ಪಿಯು ಕಾಲೇಜು ಉಪನ್ಯಾಸಕ ಶಿವಕುಮಾರ ಬುಗಡಿ ಮಾತನಾಡಿ, ವಿದ್ಯಾಕ್ಷೇತ್ರದಲ್ಲಿ ಹಿಂದುಳಿದಿರುವ

ನಮ್ಮ ಜಿಲ್ಲೆಯಲ್ಲಿನ ವಿದ್ಯಾರ್ಥಿಗಳನ್ನು ವಿದ್ಯಾವಂತರನ್ನಾಗಿ ಮಾಡಿ ಸಮಾಜದಲ್ಲಿ ಉನ್ನತ ವ್ಯಕ್ತಿಗಳನ್ನಾಗಿ ಮಾಡುವ ಹಾಗೂ ಈಗಿನ ಜಾಗತಿಕ ಪ್ರಪಂಚದಲ್ಲಿನ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿ ನಮ್ಮ ವಿದ್ಯಾರ್ಥಿಗಳು ಮುಂದೆ ಬರಲು ಸಂಸ್ಥೆಯ ಎಲ್ಲಾ ಶಿಕ್ಷಕರು ದುಡಿಯುತ್ತಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ನಿವೃತ್ತ ಶಿಕ್ಷಕ ಎ.ವಿ.ಪಾಟೀಲ ಮಾತನಾಡಿ, ಶ್ರದ್ಧೆಯಿಂದ ಅಭ್ಯಾಸ ಮಾಡುವವನು ದೊಡ್ಡ ಸಾಧಕನಾಗುತ್ತಾನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಗಲುವ ವಿದ್ಯಾರ್ಥಿಗಳ ಅಂತರಾಳದಲ್ಲಿ ಹುದುಗಿದ್ದ ಸಿಹಿ–ಕಹಿ ನೆನಪುಗಳ ಬುತ್ತಿ ಒಂದೊಂದಾಗಿ ಬಿಚ್ಚ ತೊಡಗಿತು. ವಿದ್ಯಾರ್ಥಿಗಳ ಆ ಅಳು ಮುಖದಲ್ಲಿ ನೋವಿತ್ತು, ನಲಿವಿತ್ತು, ತೃಪ್ತಿ ಇತ್ತು. ಉನ್ನತ ಶಿಕ್ಷಣ ಪಡೆಯುವ ಆನಂದ. ಜತೆಗಿದ್ದವರನ್ನು ಕಳೆದುಕೊಳ್ಳುವ ನೋವು, ಶಾಲೆಯ ಸುಂದರ ರಸನಿಮಿಷಗಳನ್ನು ಸದುಪಯೋಗಪಡಿಸಲಾಗದ ಅಸಂತೃಪ್ತಿ, ಶಾಲೆ ಹಾಗೂ ಕಿರಿಯರನ್ನು ಅಗಲಿದ ವಿದ್ಯಾರ್ಥಿಗಳ ಮನದಲ್ಲಿ ಇನ್ನೂ ಅಚ್ಚಳಿಯದೆ ಉಳಿದುಕೊಂಡಿದೆ. ಕಿರಿಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಸಮ್ಮುಖದಲ್ಲಿ ಎಸ್ಎಸ್ಎಲ್ಸಿ ವಿದ್ಯಾರ್ಥಿಗಳು ಆಡಿದ ಮಾತುಗಳು ಶಾಲಾ ಜೀವನವನ್ನು ತೆರೆದಿಟ್ಟಿತು.

ಶಾಲಾ ವರದಿ ವಾಚನವನ್ನು ಆರ್.ವಿ.ಭುಜಂಗನವರ ಓದಿದರು.

ಆದರ್ಶ ವಿದ್ಯಾರ್ಥಿ ಅಜೀತ ಚವ್ಹಾಣ್, ಆದರ್ಶ ವಿದ್ಯಾರ್ಥಿನಿ ಅಶ್ವಿನಿ ಚವ್ಹಾಣ್, ಉತ್ತಮ ಕ್ರೀಡಾಪಟು ವಿಶಾಲ ವಾಲಿಕಾರ, ಉತ್ತಮ ಕ್ರೀಡಾಪಟು ವಿದ್ಯಾರ್ಥಿನಿ ತೇಜಶ್ವಿನಿ ರಾಠೋಡ, ಉತ್ತಮ ಗಾಯಕ ಪ್ರೀತಮ್ ಕರ್ಜಗಿ, ಉತ್ತಮ ಗಾಯಕಿ ರೇಖಾ ನಾಯಕ, ಆಂಗ್ಲ ಮಾಧ್ಯಮದಲ್ಲಿ ಆದರ್ಶ ವಿದ್ಯಾರ್ಥಿ ಸಂದೀಪ ಚವ್ಹಾಣ್, ಆದರ್ಶ ವಿದ್ಯಾರ್ಥಿನಿ ಐಶ್ವರ್ಯ ಪಟ್ಟದ, ಉತ್ತಮ ಕ್ರೀಡಾಪಟು ಆದರ್ಶ ರಾಠೋಡ, ಉತ್ತಮ ಗಾಯಕಿ ಸುಹಾಶಿನಿ ಕಿಟ್ಟಾರವರು ಪಡೆದರು.

ಈ ಸಂದರ್ಭದಲ್ಲಿ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಮುಖ್ಯ ಗುರುಗಳಾದ ಸಂದೀಪ ರಾಠೋಡ, ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ಎಂ.ಬಿ.ಪೂಜಾರಿ ಸೇರಿದಂತೆ ಶಿಕ್ಷಕ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸ್ವಾಗತ ಶಾಲೆಯ ಮುಖ್ಯ ಗುರು ಇ.ಡಿ.ಲಮಾಣಿ, ನಿರೂಪಣೆ ಎ.ಎಂ.ನಾಗೊಂಡ ಹಾಗೂ ವಂದನಾರ್ಪಣೆಯನ್ನು ಎಸ್.ಕೆ.ಶಿಂಧೆ ನೆರವೇರಿಸಿದರು.

ಐಕ್ಯತಾ ಸಮಾವೇಶ: ಉಚಿತ ಬಸ್ ಸೇವೆ

ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಬೆಂಗಳೂರಿನ ಅರಮನೆ ಮೈದಾನದಲ್ಲಿ ಫೆ.25 ರಂದು ನಡೆಯಲಿರುವ ಸಂವಿಧಾನ ಜಾಗೃತಿ ಮತ್ತು ರಾಷ್ಟ್ರೀಯ ಐಕ್ಯತಾ ಸಮಾವೇಶದಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ಸಾರ್ವಜನಿಕರಿಗೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಉಚಿತ ಕೆಎಸ್ಆರ್ಟಿಸಿ ಕೆಂಪು ಬಸ್ ಸೌಲಭ್ಯ ಕಲ್ಪಿಸಲಾಗಿದೆ.

ಮುದ್ದೇಬಿಹಾಳ ಹಾಗೂ ತಾಳಿಕೋಟೆ ತಾಲೂಕು ವ್ಯಾಪ್ತಿಯ ಸಾರ್ವಜನಿಕರು ಪಟ್ಟಣದ ಹುಡ್ಕೋದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಕಾರ್ಯಲಯದಲ್ಲಿ ಸಿಗುವ ಅರ್ಜಿಯನ್ನು ಸ್ವೀಕರಿಸಿ ಭರ್ತಿ ಮಾಡಿ ಜೊತೆಗೆ ಜಾತಿ ಪ್ರಮಾಣ ಪತ್ರ, ಆಧಾರ ಕಾರ್ಡ್, ಕುಟುಂಬ ಪಡಿತರ ಚೀಟಿಯ ಝೆರಾಕ್ಸ್ ಪ್ರತಿಗಳನ್ನು ಫೆ.24 ರ ಮದ್ಯಾಹ್ನ 1 ಗಂಟೆಯ ಒಳಗೆ ನೀಡಿದಲ್ಲಿ ಉಚಿತವಾಗಿ ಪ್ರಯಾಣಿಸಿ ಭಾಗವಹಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖ